Government of Tamilnadu

# ಮೂರನೇ ತರಗತಿ

## STANDARD THREE
KANNADA MEDIUM

## ಅವಧಿ III
TERM III

ಭಾಗ 2 Volume 2

ಗಣಿತ MATHEMATICS

ವಿಜ್ಞಾನ SCIENCE

ಸಮಾಜ ವಿಜ್ಞಾನ SOCIAL SCIENCE

*Untouchability is Inhuman and a Crime*

Department of School Education

© Government of Tamilnadu

First Edition - 2012
Revised Edition - 2013
Reprint - 2014
(This book is published under Uniform System of School Education Scheme in Trimester Pattern)

Textbook Prepared and Compiled By

State Council of Educational Research and Training

College Road, Chennai - 600 006.

Textbook Printing

Tamil Nadu Textbook and Educational Services Corporation

College Road, Chennai - 600 006.

This book has been printed on 80 G.S.M. Maplitho Paper

Price : Rs.

Printed by Web Offset at :

Textbook available at

**www.textbooksonline.tn.nic.in**

# ಪರಿವಿಡಿ

## ಗಣಿತ (MATHEMATICS) (1-61)


| ಕ್ರ. ಸಂಖ್ಯೆ | ಪರಿವಿಡಿ | ಪು. ಸಂಖ್ಯೆ |
|---|---|---|
| 1. | ಸಮಯ (ಕಾಲ) | 1 |
| 2. | ಹಣ | 17 |
| 3. | ಭಿನ್ನರಾಶಿಯ ಸಂಖ್ಯೆಗಳು | 28 |
| 4. | ನಮೂನೆಗಳು | 38 |
| 5. | ದತ್ತಾಂಶಗಳ ಅಧ್ಯಯನ | 51 |


## ವಿಜ್ಞಾನ (SCIENCE) (62-102)


| ಕ್ರ. ಸಂಖ್ಯೆ | ಪರಿವಿಡಿ | ಪು. ಸಂಖ್ಯೆ |
|---|---|---|
| 1. | ಗಾಳಿಯೇ. . .! ತಂಗಾಳಿಯೇ!! | 64 |
| 2. | ನೀರು | 75 |
| 3. | ಚಂದ್ರನ ಕಡೆಗೆ | 86 |
| 4. | ಗೊಂಬೆಗಳ ಪ್ರಪಂಚ | 95 |


## ಸಮಾಜ ವಿಜ್ಞಾನ (SOCIAL SCIENCE) (103-143)


| ಕ್ರ. ಸಂಖ್ಯೆ | ಪರಿವಿಡಿ | ಪು. ಸಂಖ್ಯೆ |
|---|---|---|
| 1. | ನಮ್ಮ ಜಿಲ್ಲೆ | 104 |
| 2. | ಐದು ರೀತಿಯ ಭೂಪ್ರದೇಶಗಳು | 117 |
| 3. | ರೆಕ್ಕೆಯುಳ್ಳ ಗೆಳೆಯರು | 128 |

# ಗಣಿತ

**MATHEMATICS**

**KANNADA MEDIUM**

## ಮೂರನೇ ತರಗತಿ

**STANDARD THREE**

## ಅವಧಿ III

**TERM III**

# 1 ಸಮಯ (ಕಾಲ)

## ಸಮಯವನ್ನು ಓದುವುದು

ಗಡಿಯಾರವು ನಮಗೆ ಸಮಯವನ್ನು ತಿಳಿಸುವುದು.

ಗಡಿಯಾರವನ್ನು ನೋಡಿ.

ಗಡಿಯಾರದಲ್ಲಿ ಸಂಖ್ಯೆಗಳನ್ನು (1 ರಿಂದ 12) ಗುರುತಿಸಿರುವುದನ್ನು ನೋಡಬಹುದು.

ಗಡಿಯಾರದಲ್ಲಿ ಎರಡು ಮುಳ್ಳುಗಳಿವೆ. ಒಂದು ದೊಡ್ಡ ಮುಳ್ಳು ಮತ್ತೊಂದು ಚಿಕ್ಕ ಮುಳ್ಳು.

ದೊಡ್ಡ ಮುಳ್ಳನ್ನು ನಿಮಿಷದ ಮುಳ್ಳು ಎನ್ನುತ್ತೇವೆ. ಇದು ನಿಮಿಷಗಳನ್ನು ತೋರಿಸುತ್ತದೆ.

ಸಣ್ಣ ಮುಳ್ಳನ್ನು ಗಂಟೆಯ ಮುಳ್ಳು ಎನ್ನುತ್ತೇವೆ. ಇದು ಘಂಟೆಗಳನ್ನು ತೋರಿಸುತ್ತದೆ.

ನಿಮಿಷದ ಮುಳ್ಳು 12ಕ್ಕೆ ಬಂದಾಗ ಗಂಟೆಯ ಮುಳ್ಳು ಆ ದಿನದ ಗಂಟೆಯನ್ನು ತೋರಿಸುತ್ತದೆ.

ಗಡಿಯಾರದ ಸಣ್ಣ ಮುಳ್ಳು 3 ರಲ್ಲಿದೆ.
ಗಡಿಯಾರದ ದೊಡ್ಡ ಮುಳ್ಳು 12 ರಲ್ಲಿದೆ.
ಆಗ ಸಮಯವು 3 ಗಂಟೆ ಆಗುವುದು.
ಇದನ್ನು ನಾವು 3 : 00 ಎಂದು ಬರೆಯುತ್ತೇವೆ.

**1 ಗಂಟೆಯ ಬಳಿಕ**

ಈ ಗಡಿಯಾರದಲ್ಲಿ ಗಂಟೆಯ ಮುಳ್ಳು 4 ರಲ್ಲಿ ನಿಮಿಷದ ಮುಳ್ಳು 12 ರಲ್ಲೂ ಇದೆ.
ಆದುದರಿಂದ ಈಗ 4 ಗಂಟೆ.

**ಶಿಕ್ಷಕರಿಗೆ ಸೂಚನೆ**

ಮಾದರಿಯ ಗಡಿಯಾರದ ಸಹಾಯದಿಂದ ಮಕ್ಕಳಿಗೆ ಸಮಯದ ಅಭ್ಯಾಸವನ್ನು ಮಾಡಿಸಿ.

ಗಣಿತ

## ಅಭ್ಯಾಸ 1

1) **ಸರಿಯಾದ ಗಡಿಯಾರವನ್ನು ಗುರುತಿಸು.**

| | | | | |
|---|---|---|---|---|
| | 1 ಗಂಟೆಯ ಬಳಿಕ | | | |
| | 2 ಗಂಟೆಯ ಬಳಿಕ | | | |
| | 3 ಗಂಟೆಯ ಬಳಿಕ | | | |
| | 2 ಗಂಟೆಯ ಮೊದಲು | | | |
| | 1 ಗಂಟೆಯ ಮೊದಲು | | | |
| | 3 ಗಂಟೆಯ ಮೊದಲು | | | |

2) ಸಮಯವನ್ನು ತಿಳಿದು ಉತ್ತರವನ್ನು ಚೌಕದಲ್ಲಿ ಬರೆಯಿರಿ.




3) ಕೆಳಗೆ ಕೊಟ್ಟಿರುವ ಸಮಯಕ್ಕೆ ಸರಿಯಾಗಿ ಗಡಿಯಾರದಲ್ಲಿ ಮುಳ್ಳುಗಳನ್ನು ಬರೆಯಿರಿ.



## ನಿಮಿಷವನ್ನು ಓದುವುದು

ಚಲನೆಯ ಗಡಿಯಾರದಲ್ಲಿರುವ ಮುಳ್ಳುಗಳನ್ನು ಗಮನಿಸಿ.

**ನಿಮಿಷದ ಮುಳ್ಳು, ಗಂಟೆಯ ಮುಳ್ಳಿಗಿಂತಲೂ ವೇಗವಾಗಿ ಚಲಿಸುವುದು.**

ನಿಮಿಷದ ಮುಳ್ಳು ಗಡಿಯಾರದಲ್ಲಿ ಗುರುತಿಸಲಾದ ಪ್ರತಿಯೊಂದು ಸಣ್ಣ ಗುರುತುಗಳನ್ನು ದಾಟಿ ಮುಂದುವರಿಯುವುದು.

**ಗಡಿಯಾರದಲ್ಲಿ ಅಂತಹ 60 ಸಣ್ಣ ಗುರುತುಗಳಿವೆ. ಈ ಪ್ರತಿಯೊಂದು ಸಣ್ಣ ಗುರುತನ್ನು ನಿಮಿಷವೆಂದು ಕರೆಯುತ್ತೇವೆ.**

ಗಡಿಯಾರದಲ್ಲಿ ಒಂದು ಸಂಖ್ಯೆಯಿಂದ ಇನ್ನೊಂದು ಸಂಖ್ಯೆಗೆ ತಲುಪಲು ನಿಮಿಷದ ಮುಳ್ಳಿಗೆ 5 ನಿಮಿಷಗಳು ಬೇಕಾಗುತ್ತದೆ. ಆದರೆ ಗಂಟೆಯ ಮುಳ್ಳಿಗೆ ಒಂದು ಸಂಖ್ಯೆಯಿಂದ ಇನ್ನೊಂದು ಸಂಖ್ಯೆಗೆ ತಲುಪಲು 60 ನಿಮಿಷಗಳು ಬೇಕಾಗುತ್ತದೆ.

**1 ಗಂಟೆ = 60 ನಿಮಿಷಗಳು**

**ಉದಾಹರಣೆ**

ಈ ಚಿತ್ರಗಳನ್ನು ನೋಡಿ.

ನೀವು ಏನನ್ನು ಗಮನಿಸಿದಿರಿ?

ಈಗ ಸಮಯ 9 ಗಂಟೆ.

ದೊಡ್ಡಮುಳ್ಳು 1 ರಲ್ಲಿ ಇದೆ.

ಆದುದರಿಂದ ಈಗ ಸಮಯ 9 : 05

### ಅಭ್ಯಾಸ 2

**1) ಐದೈದು ನಿಮಿಷಗಳಂತೆ ಲೆಕ್ಕ ಮಾಡಿ ಸಮಯವನ್ನು ಬರೆ:**

9 : 10

ಗಣಿತ

ಹೇಗೆ?
ನಿಮ್ಮ ಶಿಕ್ಷಕರೊಂದಿಗೆ ಚರ್ಚಿಸಿ, ತಿಳಿಯಿರಿ.

**2) ಈ ಕೆಳಗಿನ ಗಡಿಯಾರಗಳು ತೋರಿಸುವ ಸಮಯವನ್ನು ತಿಳಿದು ಉತ್ತರವನ್ನು ಚೌಕದಲ್ಲಿ ಬರೆಯಿರಿ**

**3) ಚೌಕದಲ್ಲಿ ಕೊಟ್ಟಿರುವ ಸಮಯಕ್ಕೆ ಸರಿಯಾಗಿ ಮುಳ್ಳುಗಳನ್ನು ಈ ಗಡಿಯಾರಗಳಲ್ಲಿ ಬರೆಯಿರಿ.**

| 3 : 30 | 9 : 45 | 11 : 15 | 12 : 20 |
|---|---|---|---|

## ಡಿಜಿಟಲ್ ಗಡಿಯಾರ

ಕೆಳಗಿನ ಗಡಿಯಾರಗಳನ್ನು ನೋಡಿರಿ.

ಸಾದೃಶ್ಯ (ಸಾಮಾನ್ಯ) ಗಡಿಯಾರ

ಡಿಜಿಟಲ್ ಗಡಿಯಾರ

ನೀವು ಏನನ್ನು ಗಮನಿಸಿದ್ದೀರಿ?

ಡಿಜಿಟಲ್ ಗಡಿಯಾರದಲ್ಲಿ ನಿಮಿಷದ ಮುಳ್ಳು ಮತ್ತು ಗಂಟೆಯ ಮುಳ್ಳು ಇರುವುದಿಲ್ಲ.




### ಚಟುವಟಿಕೆ 1

**1) ಕೆಳಗಿನ ಸಮಯವನ್ನು ಡಿಜಿಟಲ್ ಗಡಿಯಾರದಲ್ಲಿ ತೋರಿಸಿ.**



**2) ಡಿಜಿಟಲ್ ಗಡಿಯಾರದಲ್ಲಿ ತೋರಿಸುವ ಸಮಯವನ್ನು ಮುಳ್ಳುಗಳ ಮೂಲಕ ಈ ಗಡಿಯಾರದಲ್ಲಿ ತೋರಿಸಿ :**

**ನಿಮಗೆ ಗೊತ್ತೆ ?**

**1 ದಿನ = 24 ಗಂಟೆಗಳು**

| 12 ಗಂಟೆಗಳು | 12 ಗಂಟೆಗಳು |
| --- | --- |
| ಮಧ್ಯರಾತ್ರಿ 12 ರಿಂದ ಮಧ್ಯಾಹ್ನ 12 ರವರೆಗೆ | ಮಧ್ಯಾಹ್ನ12 ರಿಂದ ಮಧ್ಯರಾತ್ರಿ 12 ರವರೆಗೆ |

ಮಧ್ಯರಾತ್ರಿ 12 ರಿಂದ ಮಧ್ಯಾಹ್ನ 12 ರವರೆಗೆ ಇರುವ ಸಮಯವನ್ನು ಪೂರ್ವಾಹ್ನ (a.m) ಎನ್ನುತ್ತೇವೆ.

ಮಧ್ಯಾಹ್ನ 12 ರಿಂದ ಮಧ್ಯರಾತ್ರಿ 12 ರವರೆಗೆ ಇರುವ ಸಮಯವನ್ನು ಅಪರಾಹ್ನ ( p.m) ಎನ್ನುತ್ತೇವೆ.

ಮಧ್ಯರಾತ್ರಿ ಗಂಟೆ ಮತ್ತು ಮಧ್ಯಾಹ್ನದ ಗಂಟೆ ಇವುಗಳನ್ನು ಪೂರ್ವಾಹ್ನ ಅಥವಾ ಅಪರಾಹ್ನವೆಂದು ಹೇಳಬಾರದು. ಇವುಗಳು ಪೂರ್ವಾಹ್ನವೂ ಅಲ್ಲ, ಅಪರಾಹ್ನವೂ ಅಲ್ಲ.

ಗಣಿತ

## ಅಭ್ಯಾಸ 3

1) ಕೆಳಗಿನವುಗಳನ್ನು ಪೂರ್ವಾಹ್ನ ಅಥವಾ ಅಪರಾಹ್ನಗಳಲ್ಲಿ ಬರೆಯಿರಿ.

| | | |
|---|---|---|
| 1. | ಬೆಳಗಿನ ಉಪಾಹಾರ 7 : 45 | 7 : 45 a.m. |
| 2. | ಮಧ್ಯಾಹ್ನದ ಊಟ 12 : 15 | |
| 3. | ಕರಾಟೆಯ ತರಗತಿ 3 : 30 | |
| 4. | ಶಾಲೆಯಲ್ಲಿ ನಡೆಯುವ ಬೆಳಗಿನ ಪ್ರಾರ್ಥನೆ 8 : 30 | |
| 5. | ಶಾಲೆ ಮುಗಿಯುವ ಸಮಯ 4 : 00 | |
| 6. | ಸೂರ್ಯೋದಯ 5 : 00 | |
| 7. | ಸೂರ್ಯಾಸ್ತಮಾನ 6 : 00 | |
| 8. | ರಾತ್ರಿ 11 : 35 | |
| 9. | ರಾತ್ರಿ 2 : 30 | |
| 10. | ಮಧ್ಯಾಹ್ನ 1 : 30 | |

**2) ಕೆಳಗಿನ ನಿಮ್ಮ ದೈನಂದಿನ ಚಟುವಟುಕೆಗಳನ್ನು ಪೂರ್ವಾಹ್ನ ಅಥವಾ ಅಪರಾಹ್ನಗಳಲ್ಲಿ ಬರೆಯಿರಿ.**

ಬೆಳಿಗ್ಗೆ ಏಳುವುದು :

ಹಲ್ಲುಜ್ಜುವುದು

ತಿಂಡಿ ತಿನ್ನುವುದು :

ಶಾಲೆಗೆ ಹೋಗುವುದು

ಮಧ್ಯಾಹ್ನದ ವಿರಾಮ :

ಆಟವಾಡುವುದು :

ದೂರದರ್ಶನವನ್ನು ನೋಡುವುದು :

ರಾತ್ರಿಯ ಊಟ :

ಶಾಲೆಯಲ್ಲಿ ಕೊಟ್ಟ ಮನೆಗೆಲಸ ಮಾಡುವುದು :

ನಿದ್ರೆ ಮಾಡಲು ಹೊರಡುವುದು

### ಯೋಜನೆ

ಬೇರೆ ಬೇರೆ ರೀತಿಯ ಗಡಿಯಾರ ಮತ್ತು ಕೈ ಗಡಿಯಾರಗಳ ಚಿತ್ರಗಳನ್ನು ಸಂಗ್ರಹಿಸಿ.

# ದಿನದರ್ಶಿಕೆ (ಕ್ಯಾಲೆಂಡರ್)

ನನಗೆ ಗೊತ್ತು !

1 ವರ್ಷ = 12 ತಿಂಗಳು

## ಜ್ಞಾಪಿಸಿಕೊಳ್ಳಿ

| | | | |
|---|---|---|---|
| 1 ವಾರ | = | 7 | ದಿನಗಳು |
| 1 ತಿಂಗಳು | = | 30 | ದಿನಗಳು |
| 1 ವರ್ಷ | = | 365 | ದಿನಗಳು |

## I. ಬಿಟ್ಟ ಸ್ಥಳ ತುಂಬಿರಿ.

1) ಒಂದು ವರ್ಷಕ್ಕೆ ______ ದಿನಗಳು.

2) ಒಂದು ವಾರದಲ್ಲಿ ______ ದಿನಗಳಿವೆ.

3) ______ ವಾರದ ಮೊದಲ ದಿನ.

4) ಹನ್ನೆರಡು ತಿಂಗಳುಗಳು ಸೇರಿ ______ ವರ್ಷ.

5) ವರ್ಷದ ಮೊದಲ ತಿಂಗಳು ______

## II. ತಿಂಗಳುಗಳ ಅನುಕ್ರಮದಲ್ಲಿ ಚುಕ್ಕೆಗಳನ್ನು ಸೇರಿಸಿದಾಗ ಬರುವ ಚಿತ್ರಕ್ಕೆ ಬಣ್ಣ ಹಚ್ಚಿ.



## ದಿನದರ್ಶಿಕೆಯನ್ನು ಓದುವುದು

ದಿನದರ್ಶಿಕೆಯು ಒಂದು ನಿರ್ದಿಷ್ಟ ವರ್ಷದ ದಿನಗಳು, ವಾರಗಳು ಮತ್ತು ತಿಂಗಳುಗಳನ್ನು ತೋರಿಸುತ್ತದೆ. ಜನವರಿ 1 ರಿಂದ ಆರಂಭಿಸಿ ಡಿಸೆಂಬರ್ 31ರ ತನಕ ವರ್ಷವನ್ನು ನಾವು ದಿನದರ್ಶಿಕೆಯ ವರ್ಷ (ಕ್ಯಾಲೆಂಡರ್) ಎನ್ನುತ್ತೇವೆ.

ಕ್ಯಾಲೆಂಡರುಗಳಲ್ಲಿ ಎರಡು ವಿಧಗಳಿವೆ.

**ದೈನಂದಿನ ಕ್ಯಾಲೆಂಡರ್**




**ತಿಂಗಳ ಕ್ಯಾಲೆಂಡರ್**

ಮಾರ್ಚ್ 2014

| ಆ | ಸೋ | ಮಂ | ಬು | ಗು | ಶು | ಶ |
|---|---|---|---|---|---|---|
| 31 | 32 | | | | 1 | 2 |
| 3 | 4 | 5 | 6 | 7 | 8 | 9 |
| 10 | 11 | 12 | 13 | 14 | 15 | 16 |
| 17 | 18 | 19 | 20 | 21 | 22 | 23 |
| 24 | 25 | 26 | 27 | 28 | 29 | 30 |

ಜನವರಿ

| ಆ | ಸೋ | ಮಂ | ಬು | ಗು | ಶು | ಶ |
|---|---|---|---|---|---|---|
| | | | 1 | 2 | 3 | 4 |
| 5 | 6 | 7 | 8 | 9 | 10 | 11 |
| 12 | 13 | 14 | 15 | 16 | 17 | 18 |
| 19 | 20 | 21 | 22 | 23 | 24 | 25 |
| 26 | 27 | 28 | 29 | 30 | 31 | |

ಫೆಬ್ರವರಿ

| ಆ | ಸೋ | ಮಂ | ಬು | ಗು | ಶು | ಶ |
|---|---|---|---|---|---|---|
| | | | | | | 1 |
| 2 | 3 | 4 | 5 | 6 | 7 | 8 |
| 9 | 10 | 11 | 12 | 13 | 14 | 15 |
| 16 | 17 | 18 | 19 | 20 | 21 | 22 |
| 23 | 24 | 25 | 26 | 27 | 28 | |

ಮಾರ್ಚ್

| ಆ | ಸೋ | ಮಂ | ಬು | ಗು | ಶು | ಶ |
|---|---|---|---|---|---|---|
| 30 | 31 | | | | | 1 |
| 2 | 3 | 4 | 5 | 6 | 7 | 8 |
| 9 | 10 | 11 | 12 | 13 | 14 | 15 |
| 16 | 17 | 18 | 19 | 20 | 21 | 22 |
| 23 | 24 | 25 | 26 | 27 | 28 | 29 |

ಏಪ್ರಿಲ್

| ಆ | ಸೋ | ಮಂ | ಬು | ಗು | ಶು | ಶ |
|---|---|---|---|---|---|---|
| | | 1 | 2 | 3 | 4 | 5 |
| 6 | 7 | 8 | 9 | 10 | 11 | 12 |
| 13 | 14 | 15 | 16 | 17 | 18 | 19 |
| 20 | 21 | 22 | 23 | 24 | 25 | 26 |
| 27 | 28 | 29 | 30 | | | |

ಮೇ

| ಆ | ಸೋ | ಮಂ | ಬು | ಗು | ಶು | ಶ |
|---|---|---|---|---|---|---|
| | | | | 1 | 2 | 3 |
| 4 | 5 | 6 | 7 | 8 | 9 | 10 |
| 11 | 12 | 13 | 14 | 15 | 16 | 17 |
| 18 | 19 | 20 | 21 | 22 | 23 | 24 |
| 25 | 26 | 27 | 28 | 29 | 30 | 31 |

ಜೂನ್

| ಆ | ಸೋ | ಮಂ | ಬು | ಗು | ಶು | ಶ |
|---|---|---|---|---|---|---|
| 1 | 2 | 3 | 4 | 5 | 6 | 7 |
| 8 | 9 | 10 | 11 | 12 | 13 | 14 |
| 15 | 16 | 17 | 18 | 19 | 20 | 21 |
| 22 | 23 | 24 | 25 | 26 | 27 | 28 |
| 29 | 30 | | | | | |

ಜುಲೈ

| ಆ | ಸೋ | ಮಂ | ಬು | ಗು | ಶು | ಶ |
|---|---|---|---|---|---|---|
| | | 1 | 2 | 3 | 4 | 5 |
| 6 | 7 | 8 | 9 | 10 | 11 | 12 |
| 13 | 14 | 15 | 16 | 17 | 18 | 19 |
| 20 | 21 | 22 | 23 | 24 | 25 | 26 |
| 27 | 28 | 29 | 30 | 31 | | |

ಆಗಸ್ಟ್

| ಆ | ಸೋ | ಮಂ | ಬು | ಗು | ಶು | ಶ |
|---|---|---|---|---|---|---|
| 31 | | | | | 1 | 2 |
| 3 | 4 | 5 | 6 | 7 | 8 | 9 |
| 10 | 11 | 12 | 13 | 14 | 15 | 16 |
| 17 | 18 | 19 | 20 | 21 | 22 | 23 |
| 24 | 25 | 26 | 27 | 28 | 29 | 30 |

ಸೆಪ್ಟೆಂಬರ್

| ಆ | ಸೋ | ಮಂ | ಬು | ಗು | ಶು | ಶ |
|---|---|---|---|---|---|---|
| | 1 | 2 | 3 | 4 | 5 | 6 |
| 7 | 8 | 9 | 10 | 11 | 12 | 13 |
| 14 | 15 | 16 | 17 | 18 | 19 | 20 |
| 21 | 22 | 23 | 24 | 25 | 26 | 27 |
| 28 | 29 | 30 | | | | |

ಅಕ್ಟೋಬರ್

| ಆ | ಸೋ | ಮಂ | ಬು | ಗು | ಶು | ಶ |
|---|---|---|---|---|---|---|
| | | | 1 | 2 | 3 | 4 |
| 5 | 6 | 7 | 8 | 9 | 10 | 11 |
| 12 | 13 | 14 | 15 | 16 | 17 | 18 |
| 19 | 20 | 21 | 22 | 23 | 24 | 25 |
| 26 | 27 | 28 | 29 | 30 | 31 | |

ನವೆಂಬರ್

| ಆ | ಸೋ | ಮಂ | ಬು | ಗು | ಶು | ಶ |
|---|---|---|---|---|---|---|
| 30 | | | | | | 1 |
| 2 | 3 | 4 | 5 | 6 | 7 | 8 |
| 9 | 10 | 11 | 12 | 13 | 14 | 15 |
| 16 | 17 | 18 | 19 | 20 | 21 | 22 |
| 23 | 24 | 25 | 26 | 27 | 28 | 29 |

ಡಿಸೆಂಬರ್

| ಆ | ಸೋ | ಮಂ | ಬು | ಗು | ಶು | ಶ |
|---|---|---|---|---|---|---|
| | 1 | 2 | 3 | 4 | 5 | 6 |
| 7 | 8 | 9 | 10 | 11 | 12 | 13 |
| 14 | 15 | 16 | 17 | 18 | 19 | 20 |
| 21 | 22 | 23 | 24 | 25 | 26 | 27 |
| 28 | 29 | 30 | 31 | | | |

## ಚಟುವಟಿಕೆ 2

**ದಿನದರ್ಶಿಕೆಯನ್ನು ಓದಿ ಖಾಲಿ ಜಾಗವನ್ನು ತುಂಬಿರಿ.**

1. ______ ತಿಂಗಳಿನಲ್ಲಿ 31 ದಿನಗಳು.
2. ______ ತಿಂಗಳಿನಲ್ಲಿ 30 ದಿನಗಳು.
3. ನವೆಂಬರಿನಲ್ಲಿ ______ ದಿನಗಳು ಇವೆ.
4. ಫೆಬ್ರವರಿ ತಿಂಗಳಿನಲ್ಲಿ ______ ವಾರಗಳು ಇವೆ.
5. ______ ವರ್ಷದ ಕೊನೆಯ ತಿಂಗಳು.
6. ______ ವರ್ಷದ ಆರನೆಯ ತಿಂಗಳು.
7. ______ ತಿಂಗಳಿನಲ್ಲಿ ನಿಮಗೆ ಬೇಸಿಗೆಯ ರಜೆಯು ಸಿಗುತ್ತವೆ.
8. ಆಗಸ್ಟ್ ತಿಂಗಳಿನಲ್ಲಿ ______ ದಿನಗಳು.
9. ______ ತಿಂಗಳು ಜೂನ್ ಮತ್ತು ಆಗಸ್ಟ್ ತಿಂಗಳಿನ ಮಧ್ಯೆ ಬರುತ್ತದೆ.
10. ಎಫ್ ಎಂಬ ಅಕ್ಷರದಿಂದ ಆರಂಭವಾಗುವ ತಿಂಗಳು ______ ಆಗಿದೆ.



### ಕೈಯ ಚಿತ್ರ. (The Knuckle rick)

ಪ್ರತಿ ತಿಂಗಳಿನಲ್ಲಿ ಬರುವ ದಿನಗಳನ್ನು ನೆನಪಿನಲ್ಲಿಟ್ಟುಕೊಳ್ಳಲು ಇದು ಒಂದು ಸುಲಭದ ದಾರಿ.



## ಚಟುವಟಿಕೆ 3

**ಚಿತ್ರವನ್ನು ನೋಡಿ ಚೌಕಗಳಲ್ಲಿ ತುಂಬಿರಿ.**

| | | | | | |
|---|---|---|---|---|---|
| 1. | ಜನವರಿ | 31 ದಿನಗಳು | 7. | ಜುಲೈ | |
| 2. | ಫೆಬ್ರವರಿ | | 8. | ಆಗಸ್ಟ್ | |
| 3. | ಮಾರ್ಚ್ | | 9. | ಸೆಪ್ಟೆಂಬರ್ | |
| 4. | ಏಪ್ರಿಲ್ | | 10. | ಅಕ್ಟೋಬರ್ | |
| 5. | ಮೇ | | 11. | ನವೆಂಬರ್ | |
| 6. | ಜೂನ್ | | 12. | ಡಿಸೆಂಬರ್ | |

**ಅಧಿಕ ವರ್ಷ :**

ಫೆಬ್ರವರಿ 2013

| ಆ | ಸೋ | ಮ | ಬು | ಗು | ಶು | ಶ |
|---|---|---|---|---|---|---|
| | | | 1 | 2 | 3 | 4 |
| 5 | 6 | 7 | 8 | 9 | 10 | 11 |
| 12 | 13 | 14 | 15 | 16 | 17 | 18 |
| 19 | 20 | 21 | 22 | 23 | 24 | 25 |
| 26 | 27 | 28 | 29 | | | |

ಫೆಬ್ರವರಿ 2013

| ಆ | ಸೋ | ಮ | ಬು | ಗು | ಶು | ಶ |
|---|---|---|---|---|---|---|
| | | | | | 1 | 2 |
| 3 | 4 | 5 | 6 | 7 | 8 | 9 |
| 10 | 11 | 12 | 13 | 14 | 15 | 16 |
| 17 | 18 | 19 | 20 | 21 | 22 | 23 |
| 24 | 25 | 26 | 27 | 28 | | |

ಫೆಬ್ರವರಿ 2013 ರಲ್ಲಿ 28 ದಿನಗಳು ಇದೆ,
ಫೆಬ್ರವರಿ 2012 ರಲ್ಲಿ 29 ದಿನಗಳು ಇದೆ,
ಯಾಕೆ?

ಯಾಕೆಂದರೆ 2012 ಅಧಿಕ ವರ್ಷವಾಗಿದೆ. ಅಧಿಕ ವರ್ಷವು ನಾಲ್ಕು ವರ್ಷಗಳಿಗೊಮ್ಮೆ ಬರುತ್ತದೆ. ಅಧಿಕ ವರ್ಷದಲ್ಲಿ ಫೆಬ್ರವರಿಯಲ್ಲಿ 29 ದಿನಗಳು ಇರುತ್ತವೆ.

## ಚಟುವಟಿಕೆ 4

| ಜನವರಿ 2014 | | | | | | |
|---|---|---|---|---|---|---|
| ಆ | ಸೋ | ಮ | ಬು | ಗು | ಶು | ಶ |
| | | | 1 | 2 | 3 | 4 |
| 5 | 6 | 7 | 8 | 9 | 10 | 11 |
| 12 | 13 | 14 | 15 | 16 | 17 | 18 |
| 19 | 20 | 21 | 22 | 23 | 24 | 25 |
| 26 | 27 | 28 | 29 | 30 | 31 | |
| | | | | | | |

**ಮೇಲಿನ ದಿನದರ್ಶಿಕೆಯನ್ನು ನೋಡಿ ಚೌಕಗಳನ್ನು ತುಂಬಿರಿ.**

| | |
|---|---|
| 1. ಜನವರಿ 2014ರಲ್ಲಿ ಇರುವ ದಿನಗಳ ಸಂಖ್ಯೆ | |
| 2. ಆದಿತ್ಯವಾರಗಳ ಸಂಖ್ಯೆ | |
| 3. ರಜಾ ದಿನಗಳ ಸಂಖ್ಯೆ | |
| 4. ಜನವರಿ 14ನೇ ದಿನ | |
| 5. ಪ್ರಜಾಪ್ರಭುತ್ವ ದಿನ ಬರುವುದು | |
| 6. ಯಾವ ದಿನದಿಂದ ವರ್ಷವು ಆರಂಭವಾಗುತ್ತದೆ | |

ಗಣಿತ

## ಚಟುವಟಿಕೆ 5

**2014 ರ ದಿನದರ್ಶಿಕೆಯನ್ನು ನೋಡಿ ಚೌಕಗಳನ್ನು ತುಂಬಿರಿ.**

| | ತಾರೀಕು & ತಿಂಗಳು | ದಿನ |
|---|---|---|
| 1. ಶಿಕ್ಷಕರ ದಿನಾಚರಣೆಯು ಈ ದಿನದಂದು | | |
| 2. ಸ್ವಾತಂತ್ರ್ಯ ದಿನಾಚರಣೆ ಈ ದಿನದಂದು | | |

3. ಪ್ರಜಾಪ್ರಭುತ್ವ ದಿನಾಚರಣೆಯು ಈ ದಿನದಂದು

4. ಗಾಂಧಿ ಜಯಂತಿಯು ಈ ದಿನದಂದು

5. ಮಕ್ಕಳ ದಿನಾಚರಣೆಯು ಈ ದಿನದಂದು

6. ವಿದ್ಯಾ ಅಭಿವೃದ್ಧಿಯ ದಿನವು

## ತಾರೀಕನ್ನು ಓದುವುದು.




ಜನ್ಮ ದಿನಾಂಕವನ್ನು ಈ ರೀತಿಯಾಗಿ ಬರೆಯಬಹುದು.

| ತಾರೀಕು | ತಿಂಗಳು | ವರ್ಷ |
|---|---|---|
| 02 | 10 | 1869 |

## ಕಾಲಗಣನೆಯ ಕ್ರಮ

ಘಟನೆಗಳು ನಡೆದುದಕ್ಕೆ ಅನುಗುಣವಾಗಿ ಅವುಗಳನ್ನು ದಾಖಲಿಸುವುದನ್ನು "ಕಾಲಗಣನೆಯ ಕ್ರಮ" ಎಂದು ಕರೆಯಲಾಗುತ್ತದೆ.

ದಿನದರ್ಶಿಕೆಯಿಂದ ಕೆಳಗಿನ ನಾಯಕರ ಜನ್ಮ ದಿನಾಂಕವನ್ನು ನೋಡಿ ಮತ್ತು ಅವುಗಳನ್ನು ಕಾಲಗಣನೆಯ ಕ್ರಮದಲ್ಲಿ ಪಟ್ಟಿಮಾಡಿ.

ಕಾಮರಾಜರ್, ಗಾಂಧೀಜಿ, ಆರಿಇರ್ ಅಣ್ಣಾ, ಡಾ.ಅಂಬೇಡ್ಕರ್, ಜವಾಹರಲಾಲ್ ನೆಹರೂ.

# ಕೆಲಸದ ಹಾಳೆ

ತಾರೀಕು:....................

1. ಒಂದು ವರ್ಷದಲ್ಲಿ ________ ತಿಂಗಳುಗಳು.
2. ಅಧಿಕ ವರ್ಷದ ಫೆಬ್ರವರಿ ತಿಂಗಳಲ್ಲಿ ________ ದಿನಗಳು.
3. 2013 ________ ವರ್ಷ ಅಲ್ಲ.
4. ಒಂದು ಗಡಿಯಾರದಲ್ಲಿ ಚಿಕ್ಕ ಮುಳ್ಳು ________ ಮುಳ್ಳು ಆಗಿದೆ.

5. ಸಮಯವನ್ನು ಬರೆಯಿರಿ.

________

6. ಮುಳ್ಳುಗಳನ್ನು ಎಳೆಯಿರಿ.

12 : 15

7. ಪೂರ್ವಾಹ್ನ ಅಥವಾ ಅಪರಾಹ್ನ ಎಂಬುದನ್ನು ಬರೆಯಿರಿ.

ಸಚಿನ್ ಸಾಯಂಕಾಲ 4 ಗಂಟೆಗೆ ಕ್ರಿಕೆಟ್ ಆಡುತ್ತಾನೆ ________

ಸೂರ್ಯನು ಬೆಳಿಗ್ಗೆ 5.30 ಕ್ಕೆ ಉದಯಿಸುತ್ತಾನೆ ________

8. ನಿಮ್ಮ ಜನ್ಮ ದಿನಾಂಕವನ್ನು ಬರೆಯಿರಿ:

| ದಿನ | ತಿಂಗಳು | ವರ್ಷ |
|---|---|---|
| | | |

9. ಅಧಿಕ ವರ್ಷವು ________ ವರ್ಷಗಳಿಗೊಮ್ಮೆ ಬರುತ್ತದೆ.

ಟೀಕೆಗಳು

ಶಿಕ್ಷಕರ ಸಹಿ

# 2 ಹಣ

ಹಣವು ವಿನಿಮಯದ ಮಾಧ್ಯಮವಾಗಿದೆ. ವಸ್ತುಗಳನ್ನು ಕೊಳ್ಳುವಾಗ ನಾವು ಹಣವನ್ನು ಬಳಸುತ್ತೇವೆ. ಭಾರತದಲ್ಲಿ ಹಣದ ಏಕಮಾನವು ರೂಪಾಯಿ ಆಗಿವೆ.



ವ್ಯವಹಾರದಲ್ಲಿ ಭಾರತದಲ್ಲಿನ ಹಣವನ್ನು ರೂಪಾಯಿ ಮತ್ತು ಪೈಸೆಗಳಲ್ಲಿ ತಿಳಿಯಪಡಿಸುತ್ತೇವೆ.

ಪೈಸೆಯನ್ನು 'ಪೈ' ಎಂದೂ, ರೂಪಾಯಿಯನ್ನು 'ರೂ' ಎಂದೂ ರೂಪಾಯಿಗಳಿಗೆ 'ರೂಗಳು' ಎಂದೂ ಬರೆಯುತ್ತೇವೆ. ಇದಲ್ಲದೆ ರೂಪಾಯಿಗಳನ್ನು ಮತ್ತು ಪೈಸೆಯನ್ನು ವಿಂಗಡಿಸಲು ಬಿಂದು ( • ) ವೊಂದನ್ನು ಉಪಯೋಗಿಸುತ್ತೇವೆ.

## ಉದಾಹರಣೆ

ಅರುವತ್ತು ರೂ ಮತ್ತು ಐವತ್ತು ಪೈಸೆಗಳನ್ನು ಸಂಖ್ಯಾರೂಪದಲ್ಲಿ ರೂ. 60.50 ಎಂದು ಬರೆಯುತ್ತೇವೆ.

ಭಾರತ ಸರ್ಕಾರವು ನಮ್ಮ ಹಣವನ್ನು ಗುರುತಿಸಲು ₹ ಚಿಹ್ನೆಯನ್ನು ಪರಿಚಯಿಸಿದೆ. ಆದುದರಿಂದ ರೂ. 60.50 ನ್ನು ₹ 60.50 ಎಂದು ಭಾರತದ ಹಣ.

### ನಮ್ಮ ಭಾರತದ ಹಣ

ಗಣಿತ

## ರೂಪಾಯಿಗಳ ಸೂಚನೆ :



## ನಾಣ್ಯಗಳ ಸೂಚನೆ :



## ರೂಪಾಯಿ ಮತ್ತು ಪೈಸೆಗಳ ಸಂಬಂಧ

**100 ಪೈಸೆ = 1 ರೂಪಾಯಿ**

ಬೇರೆ ಬೇರೆ ನಾಣ್ಯಗಳನ್ನು ಉಪಯೋಗಿಸಿ ನಾವು ಒಂದು ರೂಪಾಯಿಯನ್ನು ಮಾಡಬಹುದು.



**ಶಿಕ್ಷಕರಿಗೆ ಸೂಚನೆ**

ಸಂಗತಿಯನ್ನು ತಿಳಿಸಿ,

- 1 ಪೈಸೆ, 2 ಪೈಸೆ, 5 ಪೈಸೆ, 10 ಪೈಸೆ, 20 ಪೈಸೆಯ ನಾಣ್ಯಗಳು ಚಲಾವಣೆಯಲ್ಲಿ ಇಲ್ಲ.
- 1 ರೂ ಮತ್ತು 2 ರೂಪಾಯಿಯ ನೋಟುಗಳು ಚಲಾವಣೆಯಲ್ಲಿ ಇಲ್ಲ.

### ಅಭ್ಯಾಸ 1

**1. ಕೆಳಗಿನವುಗಳನ್ನು ಹೊಂದಿಸಿ :**

| | |
|---|---|
| ₹ 250 | |
| ₹ 650 | |
| ₹ 1000 | |

## ರೂಪಾಯಿ ಮತ್ತು ಪೈಸೆಗಳನ್ನು ಬರೆಯುವುದು ಹೇಗೆ ಎಂಬುದು ನಿಮಗೆ ಗೊತ್ತೇ?

ಇಲ್ಲಿ 20 ರೂಪಾಯಿಗಳು ಮತ್ತು 50 ಪೈಸೆಗಳಿವೆ. ಅದನ್ನು ರೂಪಾಯಿಗಳು 20 ಮತ್ತು 50 ಪೈಸೆ ಎಂದು ಇದನ್ನು ರೂ. 20.50 ಅಥವಾ ₹ 20.50 ಎಂದು ಬರೆಯುತ್ತೇವೆ.

ಗಣಿತ

**2. ಖಾಲಿ ಬಿಟ್ಟ ಚೌಕಗಳನ್ನು ತುಂಬಿರಿ :**

| | |
|---|---|
| | ₹ 50. 25 |
|  | |
| | |
|  | |
| | |

## 3. ಈ ಚಿತ್ರಗಳನ್ನು ನೋಡಿ :

**ವಸ್ತುಗಳ ಬೆಲೆಗಳಿಗೆ ಅನುಗುಣವಾದ ಹಣದ ಸೂಚನೆಗೆ ಗುರುತು ಹಾಕಿ.**

| ವಸ್ತುಗಳು | ಬೆಲೆ |
|---|---|
| ಚೆಂಡು | 100, 100, 50, 50 |
| ಪುಸ್ತಕ | 100, 100, 100, 100, 100 |
| ಪೆನ್ಸಿಲಿನ ಪೆಟ್ಟಿಗೆ | 20, 20, 10, 10 |
| ಶಾಲೆಯ ಚೀಲ | 100, 100, 100, 50, 20 |
| ಬೂಟ್ಸ್ | 500, 500, 100, 100, 100, 50 |
| ಷರ್ಟ್ | 500, 100, 100, 100, 50 |
| ಪ್ಯಾಂಟ್ | 500, 100, 100, 50, 50, 50 |
| ಟಾರ್ಚ್ | 100, 50, 20, 20, 10 |
| ಟೆಡ್ಡಿ ಬೇರ್ | 100, 50, 20, 10 |
| ಬ್ಯಾಟು | 100, 100, 50, 20, 20, 10 |

## ಹಣದಲ್ಲಿ ಸಂಕಲನ ಮತ್ತು ವ್ಯವಕಲನ

ಹಣದ ಸಂಕಲನ ಮತ್ತು ವ್ಯವಕಲನವನ್ನು ಸಾಮಾನ್ಯ ಸಂಖ್ಯೆಗಳ ಸಂಕಲನ ಮತ್ತು ವ್ಯವಕಲನದಂತೆ ಮಾಡಲಾಗುವುದು.




### ಉದಾಹರಣೆ

**ಕೂಡಿಸಿರಿ ₹ 60.50 ಮತ್ತು ₹ 70.00.**

| | | | | |
|---|---|---|---|---|
| | ₹ | 60 | . | 50 |
| + | ₹ | 70 | . | 00 |
| | ₹ | 130 | . | 50 |

ರೂಪಾಯಿ ಮತ್ತು ಪೈಸೆಗಳನ್ನು ಬೇರೆ ಬೇರೆಯಾಗಿ ಎರಡು ಕಾಲಂಗಳಲ್ಲಿ ಬರೆಯಿರಿ.

ಪೈಸೆಗಳನ್ನು ಕೂಡಿಸಿ ಬರುವ ಮೊತ್ತವನ್ನು ಪೈಸೆಯ ಕೆಳಭಾಗದಲ್ಲಿಯೇ ಬರೆಯಿರಿ.

ರೂಪಾಯಿಗಳನ್ನು ಕೂಡಿಸಿ ಬರುವ ಮೊತ್ತವನ್ನು ರೂಪಾಯಿಯ ಕೆಳಭಾಗದಲ್ಲಿಯೇ ಬರೆಯಿರಿ.

**40 ರೂಪಾಯಿ 50 ಪೈಸೆಯಿಂದ 20 ರೂಪಾಯಿಗಳನ್ನು ಕಳೆಯಿರಿ.**

| | | | | |
|---|---|---|---|---|
| | ₹ | 40 | . | 50 |
| – | ₹ | 20 | . | 00 |
| | ₹ | 20 | . | 50 |

ರೂಪಾಯಿ ಮತ್ತು ಪೈಸೆಗಳನ್ನು ಬೇರೆ ಬೇರೆ ಎರಡು ಕಾಲಂಗಳಲ್ಲಿ ಬರೆಯಿರಿ.

ಪೈಸೆಗಳನ್ನು ಕಳೆದು ಬರುವ ಉತ್ತರವನ್ನು ಪೈಸೆಗಳ ಕೆಳಗೆ ಬರೆಯಿರಿ.

ರೂಪಾಯಿಗಳನ್ನು ಕಳೆದು ಬರುವ ಉತ್ತರವನ್ನು ರೂಪಾಯಿಯ ಕೆಳಗೆ ಬರೆಯಿರಿ.

## ಅಭ್ಯಾಸ 2

**1) ಸಂಕಲನ**

| | | |
|---|---|---|
| ₹ 10 . 50 | ₹ 70 . 50 | ₹ 300 . 10 |
| + ₹ 15 . 00 | + ₹ 20 . 10 | + ₹ 200 . 40 |
| | | |

**2) ವ್ಯವಕಲನ**

| | | |
|---|---|---|
| ₹ 90 . 50 | ₹ 80 . 60 | ₹ 450 . 70 |
| − ₹ 70 . 20 | − ₹ 30 . 50 | − ₹ 150 . 20 |
| | | |

### ಉದಾಹರಣೆ

1) ರಾಜನು ₹ 40.50 ಕ್ಕೆ ಒಂದು ಜ್ಯಾಮ್ ಬಾಟಲಿಯನ್ನೂ ಮತ್ತು ₹ 20.25 ಕ್ಕೆ ಒಂದು ಬ್ರೆಡ್ಡಿನ ಕಟ್ಟನ್ನು ಕೊಂಡುಕೊಂಡನು. ಹಾಗಾದರೆ ಅವನು ಖರ್ಚು ಮಾಡಿದ ಒಟ್ಟು ಹಣವೆಷ್ಟು ?

| | | |
|---|---|---|
| ಜ್ಯಾಮ್ ಬಾಟಲಿಯ ಬೆಲೆ | = | ₹ 40 . 50 |
| ಬ್ರೆಡ್ಡಿನ ಕಟ್ಟಿನ ಬೆಲೆ | = | + ₹ 20 . 25 |
| ಖರ್ಚು ಮಾಡಿದ ಒಟ್ಟು ಹಣ | = | ₹ 60 . 75 |

2) ರಾಧಳು ಮಾರ್ಕೆಟ್ಟಿಗೆ ಹೋಗುವಾಗ ₹ 50.50 ನ್ನು ತನ್ನ ಬಳಿ ತೆಗೆದುಕೊಂಡು ಹೋದಳು. ₹ 20.25 ನ್ನು ಕೊಟ್ಟು ಸ್ವಲ್ಪ ಚಾಕಲೇಟನ್ನು ತೆಗೆದುಕೊಂಡಳು. ಈಗ ಅವಳಲ್ಲಿ ಎಷ್ಟು ಹಣ ಉಳಿದಿದೆ ?

| | | |
|---|---|---|
| ಒಟ್ಟು ಹಣ | = | ₹ 50 . 50 |
| ಖರ್ಚು ಮಾಡಿದ ಹಣ | = | − ₹ 20 . 25 |
| ಉಳಿಯುವ ಹಣ | = | ₹ 30 . 25 |

## ಅಭ್ಯಾಸ 3

ಈ ಆಟಿಕೆಗಳನ್ನು ಕೊಳ್ಳಲು ನಾನೆಷ್ಟು ರೂಪಾಯಿಗಳನ್ನು ಕೊಡಬೇಕು?

ನನ್ನ ಬಳಿ ಈಗ ₹ 500 ರೂಪಾಯಿಗಳಿವೆ. ಒಂದು ಬ್ಯಾಟ್ ಮತ್ತು ಚೆಂಡನ್ನು ಕೊಂಡುಕೊಂಡರೆ ನನ್ನಲ್ಲಿ ಉಳಿಯುವ ಹಣವೆಷ್ಟು?

ಚಾಕಲೇಟುಗಳನ್ನು ತೆಗೆದುಕೊಂಡ ಬಳಿಕ ನಾನು ಅಂಗಡಿಯವನಿಗೆ ಕೊಡಬೇಕಾದ ಹಣವೆಷ್ಟು?

ನನ್ನ ಬಳಿ ₹ 30.75 ಇದೆ. ಒಂದು ಪೆನ್ನು ಮತ್ತು ಒಂದು ರಬ್ಬರನ್ನು ಕೊಂಡ ಬಳಿಕ ನನ್ನ ಬಳಿ ಹಣ ಉಳಿಯುವುದೇ ?

| | |
|---|---|
| | |
| | |

## ಯೋಜನೆ

ನಿನ್ನ ತರಗತಿಯಲ್ಲಿ ಒಂದು ಮಾದರಿಯ ಅಂಗಡಿಯನ್ನು ರಚಿಸು.

## ಬಿಲ್ಲುಗಳು ಮತ್ತು ಬೆಲೆಯ ಪಟ್ಟಿ

ಬಿಲ್ಲುಗಳು ನಮಗೆ ನಾವು ಕೊಂಡ ವಸ್ತುಗಳು ಅವುಗಳ ಬೆಲೆ, ಪಾವತಿ ಮಾಡಿದ ಒಟ್ಟು ಹಣ, ಕೊಂಡ ತಾರೀಕು, ಬಿಲ್ಲಿನ ಸಂಖ್ಯೆ ಮತ್ತು ಅಂಗಡಿಯ ಹೆಸರುಗಳನ್ನು ತಿಳಿಯಲು ಸಹಾಯಕವಾಗಿದೆ.



ರಾಮು ಪುಸ್ತಕದ ಅಂಗಡಿಗೆ ಹೋಗಿ ಈ ಕೆಳಗಿನ ವಸ್ತುಗಳನ್ನು ಕೊಂಡನು. ಕೆಳಗೆ ತೋರಿಸಿದ ಬಿಲ್ಲು ವಸ್ತುಗಳ ಬೆಲೆಯನ್ನು ಮತ್ತು ಅವನು ಅಂಗಡಿಯವನಿಗೆ ಕೊಟ್ಟ ಒಟ್ಟು ಹಣವನ್ನು ತೋರಿಸುತ್ತದೆ.

| ಬಿಲ್ಲಿನ ಸಂಖ್ಯೆ : 767<br>ತಾರೀಕು : 08.09.2010 | | | | ಗುರು ಸ್ಟೇಶನರಿ ಅಂಗಡಿ<br>104. ಮುಖ್ಯರಸ್ತೆ, ಚೆನ್ನೈ. | |
|---|---|---|---|---|---|
| ಕ್ರಮ ಸಂಖ್ಯೆ | ವಿವರಗಳು | ಪರಿಮಾಣ | ದರ | ಒಟ್ಟು ಹಣ | |
| | | | | ರೂ. | ಪೈ. |
| 1. | ಬಾಲ್‌ಪ್ಯಾಂಟ್ ಪೆನ್ | 10 | 5.00 | 50 | 00 |
| 2. | ನೋಟು ಪುಸ್ತಕ | 10 | 10.00 | 100 | 00 |
| 3. | ಸ್ಕೆಚ್ ಪೆನ್ ಸೆಟ್ | 6 | 15.00 | 90 | 00 |
| 4. | ಕ್ರೆಯೋನ್ | 2 | 20.00 | 40 | 00 |
| 5. | ಮಾರ್ಕರ್ | 4 | 15.00 | 60 | 00 |
| | | | ಮೊತ್ತ | 340 | 00 |

**ಮೇಲಿನ ಬಿಲ್ಲುಗಳನ್ನು ಉಪಯೋಗಿಸಿ ಖಾಲಿ ಜಾಗವನ್ನು ತುಂಬಿರಿ :**

1. ಅಂಗಡಿಯ ಹೆಸರು ________________
2. ಬಿಲ್ಲಿನ ಸಂಖ್ಯೆ ________________
3. ಬಿಲ್ಲಿನ ತಾರೀಕು ________________
4. ಕೊಂಡುಕೊಂಡ ವಸ್ತುಗಳ ಒಟ್ಟು ಸಂಖ್ಯೆ ________________
5. ಕೊಟ್ಟ ಹಣದ ಒಟ್ಟು ಸಂಖ್ಯೆ ________________
6. ಒಂದು ಮಾರ್ಕರ್ ಪೆನ್ನಿನ ಬೆಲೆ ________________
7. ಎರಡು ಕ್ರೆಯೋನ್‌ಗಳ ಬೆಲೆ ________________
8. ಒಂದು ಸ್ಕೆಚ್ ಪೆನ್ ಸೆಟ್ಟಿನ ಬೆಲೆ ________________
9. ಒಂದು ಬಾಲ್‌ಪ್ಯಾಂಟ್ ಪೆನ್ನಿನ ಬೆಲೆ ________________
10. ಹತ್ತು ನೋಟು ಪುಸ್ತಕಗಳ ಬೆಲೆ ________________

## ಅಭ್ಯಾಸ 4

ಸೂಚಕ ಮಾರ್ಕೆಟಿನಲ್ಲಿ ಈ ಕೆಳಗಿನ ವಸ್ತುಗಳನ್ನು ಕೊಂಡುಕೊಂಡೆವು. ನಾವು ಅಂಗಡಿಯವನಿಗೆ ಕೊಡಬೇಕಾದ ಒಟ್ಟು ಹಣವನ್ನು ಕಂಡು ಹಿಡಿಯಿರಿ.

| ಕ್ರಮ ಸಂಖ್ಯೆ | ವಿವರಗಳು | ಪರಿಮಾಣ | ದರ | ಒಟ್ಟು ಹಣ | |
|---|---|---|---|---|---|
| | | | | ರೂ. | ಪೈ. |
| 1. | ಜ್ಯಾಂ ಬಾಟಲ್ | 2 | 30.00 | 60 | 00 |
| 2. | ಜೇನುಹನಿಯ ಬಾಟಲ್ | 3 | 15.00 | | |
| 3. | ತುಪ್ಪದ ಪ್ಯಾಕೆಟ್ಟು | 1 | 70.00 | | |
| 4. | ತಂಪು ಪಾನೀಯಗಳು | 2 | 40.00 | | |
| 5. | ಚಾಕಲೇಟ್ | 4 | 6.00 | | |
| | | | ಮೊತ್ತ | | |

### ಚಟುವಟಿಕೆ 1

**ಮೇಲಿನ ಬಿಲ್ಲುಗಳಿಗೆ ದರದ ಚಾರ್ಟನ್ನು ತಯಾರಿಸಿ.**

| ಕ್ರ. ಸಂ. | ವಿವರಗಳು | ಪರಿಮಾಣ | ದರ |
|---|---|---|---|
| | | | |
| | | | |

### ಯೋಜನೆ

ವಿದ್ಯಾರ್ಥಿಗಳಲ್ಲಿ ಗುಂಪಿಗೆ ಅನುಗುಣವಾಗಿ ವಿವಿಧ ರೀತಿಯ ಬಿಲ್ಲುಗಳನ್ನು ಮತ್ತು ದರದ ಚಾರ್ಟುಗಳನ್ನು ಸಂಗ್ರಹಿಸಲು ಹೇಳಿ ಮತ್ತು ಅವರಲ್ಲಿ ಆಲ್ಬಮನ್ನು ತಯಾರಿಸುವಂತೆ ಹೇಳಿ.

# 3 ಭಿನ್ನರಾಶಿಯ ಸಂಖ್ಯೆಗಳು



ಇಲ್ಲೊಂದು ಕಲ್ಲಂಗಡಿ ಹಣ್ಣಿದೆ. ಇದನ್ನುಎರಡು ತುಂಡುಗಳಾಗಿ ಮಾಡಲಾಯಿತು. ಈ ಎರಡು ತುಂಡುಗಳನ್ನು ನೋಡಿ ಆ ಎರಡು ತುಂಡುಗಳು ಒಂದಕ್ಕೊಂದು ಸಮವಾಗಿದೆಯೇ? ಇಲ್ಲ, ಕಲ್ಲಂಗಡಿಯ ಆ ಎರಡು ತುಂಡುಗಳು ಒಂದಕ್ಕೊಂದು ಸಮನಾಗಿಲ್ಲ.



ಇಲ್ಲಿ ಇನ್ನೊಂದು ಕಲ್ಲಂಗಡಿ ಹಣ್ಣಿದೆ. ಇದನ್ನು ಎರಡು ತುಂಡುಗಳಾಗಿ ಮಾಡಿದೆವು. ಈ ಎರಡು ತುಂಡುಗಳನ್ನು ಗಮನಿಸಿ. ಈ ಎರಡು ತುಂಡುಗಳು ಒಂದಕ್ಕೊಂದು ಸಮನಾಗಿದೆಯೇ? ಹೌದು, ಕಲ್ಲಂಗಡಿಯ ಈ ಎರಡು ತುಂಡುಗಳು ಒಂದಕ್ಕೊಂದು ಸಮನಾಗಿವೆ.

## ಒಂದು ಅರ್ಧ (ಅರ್ಧ)



ಮೇಲೆ ಕೊಡಲಾದ ಆಕೃತಿಗಳಿಂದ ನೀವೇನು ಗಮನಿಸುವಿರಿ. ಪ್ರತಿಯೊಂದು ಆಕೃತಿಯಲ್ಲೂ ಎರಡು ಸಮನಾದ ಭಾಗಗಳಿವೆ. ಅವುಗಳಲ್ಲಿರುವ ಒಂದು ಭಾಗಕ್ಕೆ ಮಾತ್ರ ಬಣ್ಣ ಹಚ್ಚಿದೆ !

ಪ್ರತಿಯೊಂದು ಭಾಗವನ್ನು ಒಂದು ಅರ್ಧ ಎಂದು ಕರೆಯುತ್ತೇವೆ.

ಇದನ್ನು $\frac{1}{2}$ ಎಂದು ಬರೆಯುತ್ತೇವೆ, 'ಒಂದು ಅರ್ಧ'ಎಂದು ಓದುತ್ತೇವೆ.

## ಅಭ್ಯಾಸ 1

**ಪ್ರತಿಯೊಂದು ಚಿತ್ರದ ಒಂದು ಅರ್ಧಭಾಗಕ್ಕೆ ಬಣ್ಣ ಹಚ್ಚಿ.**

**ಉದಾಹರಣೆ**



(ಎ) (ಬಿ) (ಸಿ) (ಡಿ)



### ನಾಲ್ಕನೇ ಒಂದು

**ಕೆಳಗಿನ ಚಿತ್ರಗಳಿಂದ ನೀವು ಏನನ್ನು ಗಮನಿಸುವಿರಿ?**



ಪ್ರತಿ ಚಿತ್ರದಲ್ಲೂ ನಾಲ್ಕು ಸಮ ಭಾಗಗಳಿವೆ.

ಅವುಗಳಲ್ಲಿ ಒಂದು ಭಾಗಕ್ಕೆ ಬಣ್ಣ ಹಚ್ಚಲಾಗಿದೆ.

ಬಣ್ಣ ಹಚ್ಚಿದ ಭಾಗವನ್ನು ಒಂದು ಕಾಲು ಎಂದು ಕರೆಯುತ್ತೇವೆ.

**ಅದನ್ನು $\frac{1}{4}$ ಎಂದು ಬರೆಯುತ್ತೇವೆ ಮತ್ತು 'ನಾಲ್ಕನೇ ಒಂದು' ಎಂದು ಓದುತ್ತೇವೆ.**

## ಅಭ್ಯಾಸ 2

**ಪ್ರತಿಯೊಂದು ಚಿತ್ರದ ನಾಲ್ಕನೇ ಒಂದು ಭಾಗಕ್ಕೆ ಬಣ್ಣ ಹಚ್ಚಿ .**

**ಉದಾಹರಣೆ**



(a)



(b)



(c)



(d)



## ನಾಲ್ಕರ ಮೂರು ಭಾಗ

**ಕೆಳಗಿನ ಚಿತ್ರಗಳಿಂದ ನೀವೇನು ಗಮನಿಸುವಿರಿ?**



ಪ್ರತಿ ಚಿತ್ರದಲ್ಲೂ ನಾಲ್ಕು ಸಮ ಭಾಗಗಳಿವೆ.ಅವುಗಳಲ್ಲಿ ಮೂರು ಭಾಗಕ್ಕೆ ಬಣ್ಣ ಹಚ್ಚಲಾಗಿದೆ. ಆದುದರಿಂದ ಬಣ್ಣ ಹಚ್ಚಿದ ಭಾಗವನ್ನು ನಾಲ್ಕರ ಮೂರು ಭಾಗ ಎಂದು ಗುರುತಿಸಲಾಗುತ್ತದೆ..

ಅದನ್ನು $\frac{3}{4}$ ಎಂದು ಬರೆಯುತ್ತೇವೆ ಮತ್ತು ನಾಲ್ಕರ ಮೂರು ಭಾಗ ಎಂದು ಓದುತ್ತೇವೆ

$\frac{1}{2}$ $\frac{1}{4}$ $\frac{3}{4}$ ಮೊದಲಾದವುಗಳು ಭಿನ್ನರಾಶಿಯ ಸಂಖ್ಯೆಗಳು

## ಅಭ್ಯಾಸ 3

**ಪ್ರತಿಯೊಂದು ಚಿತ್ರಗಳ ನಾಲ್ಕನೇ ಮೂರು ಭಾಗಕ್ಕೆ ಬಣ್ಣ ಹಚ್ಚಿ.**

**ಉದಾಹರಣೆ**



(a)



(b)



(c)



(d)



(e)



ಗಣಿತ

## ಸಂಗ್ರಹದ ಭಾಗದಲ್ಲಿ ಭಿನ್ನಾಂಶ

ಕೆಳಗಿನ ಉದಾಹರಣೆಯನ್ನು ತೆಗೆದುಕೊಳ್ಳಿ.
ಇಲ್ಲಿ ನಾಲ್ಕು ಗಾಳಿಪಟಗಳಿವೆ.
ಅವುಗಳಲ್ಲಿ ಮೂರು ಕೆಂಪು ಗಾಳಿಪಟಗಳು.
ಆದುದರಿಂದ ನಾಲ್ಕನೇ ಮೂರು ಭಾಗ ಗಾಳಿಪಟಗಳು ಕೆಂಪು ಬಣ್ಣದವುಗಳು.
ನಾಲ್ಕರ ಒಂದು ಭಾಗ ಗಾಳಿಪಟ ಹಸಿರು..



## ಅಭ್ಯಾಸ 4

**ಕೆಳಗೆ ಕೊಟ್ಟಂತೆ ಪ್ರತಿ ಸಂಗ್ರಹಕ್ಕೂ ಬಣ್ಣ ಹಚ್ಚಿ.**

**ಉದಾಹರಣೆ**

ನಾಲ್ಕರ ಒಂದು ಭಾಗಕ್ಕೆ ಬಣ್ಣ ಹಚ್ಚಿ.



(ಎ) ನಾಲ್ಕರ ಎರಡು ಭಾಗ



(ಬಿ) ಒಂದು ಅರ್ಧ



(ಸಿ) ನಾಲ್ಕರ ಮೂರು ಭಾಗ



## ಅಭ್ಯಾಸ 5

**(ಎ) ಬಣ್ಣ ಹಚ್ಚಿದ ಭಾಗವನ್ನು ತೋರಿಸುವ ಭಿನಾಂಕವನ್ನು ಬರೆಯಿರಿ.**

**ಉದಾಹರಣೆ**



$\frac{1}{2}$

(ಎ)



(ಬಿ)



(ಸಿ)



(ಡಿ)



(ಬಿ) ಸರಿಯಾದ ಭಿನಾಂಕಕ್ಕೆ ವೃತ್ತ ಹಾಕಿ.

**ಉದಾಹರಣೆ**



$\frac{2}{4}$   ( $\frac{1}{4}$ )   $\frac{3}{4}$

ಎ)



$\frac{1}{4}$   $\frac{2}{4}$   $\frac{3}{4}$

ಬಿ)



$\frac{1}{4}$   $\frac{2}{4}$   $\frac{3}{4}$

(ಸಿ) ಪ್ರತಿ ಸಂಗ್ರಹದಲ್ಲಿ ಬಣ್ಣ ಹಾಕಿದ ವಸ್ತುವಿಗೆ ಭಿನ್ನಾಂಕವನ್ನು ಬರೆಯಿರಿ.

**ಉದಾಹರಣೆ**



ಎ)



ಪೆನ್ಸಿಲುಗಳ $\frac{3}{4}$ ಭಾಗವು ನೀಲಿ ಬಣ್ಣದ್ದು.   ☐ ಟೊಪ್ಪಿಗಳ ಭಾಗವು ಹಸಿರು.

ಬಿ)



☐ ಬಾಚಣಿಗೆಗಳ ಭಾಗವು ಕಪ್ಪು.

ಸಿ)



☐ ಕಾರುಗಳ ಭಾಗವು ಹಸಿರು

**(ಡಿ) ಪ್ರತಿ ಸಂಗ್ರಹದ ಒಂದು ಅರ್ಧಕ್ಕೆ ಬಣ್ಣ ಹಾಕಿ.**

ಎ)



ಬಿ)



**(ಇ) ಪ್ರತಿ ಸಂಗ್ರಹದ ನಾಲ್ಕರ ಒಂದು ಭಾಗಕ್ಕೆ ಬಣ್ಣ ಹಚ್ಚಿ.**

ಎ)



ಬಿ)



**(ಎಫ್) ಪ್ರತಿ ಸಂಗ್ರಹದ ನಾಲ್ಕನೇ ಮೂರು ಭಾಗಕ್ಕೆ ಬಣ್ಣ ಹಾಕಿ.**




## ಚಟುವಟಿಕೆ 1

☺ ತೋರಿಸಿದಂತೆ ಕಾಗದದ ಒಂದು ವೃತ್ತಾಕಾರದ ಹಾಳೆಯನ್ನು ತೆಗೆದುಕೊಳ್ಳಿ.



☺ ಅದನ್ನು ಮಡಚಿ ಮತ್ತು ಎರಡು ಅರ್ಧಗಳಾಗಿ ಮಾಡಿ.



☺ ಪುನಃ ಅದನ್ನು ಮಡಚಿ ಮತ್ತು ತೋರಿಸಿದಂತೆ ಎರಡು ಅರ್ಧಗಳಾಗಿ ಮಾಡಿ.



☺ ಹಾಳೆಯನ್ನು ಬಿಡಿಸಿ.



ಹಾಳೆಯಲ್ಲಿರುವ ನಾಲ್ಕು ಕಾಲು ಭಾಗಗಳನ್ನು ನೋಡಿ.

**ಹಾಳೆಯಲ್ಲಿ $\frac{1}{2}$ , $\frac{1}{4}$ , $\frac{3}{4}$ ರ ಭಿನ್ನಾಂಶಗಳನ್ನು ಕಂಡು ಹಿಡಿಯಿರಿ.**

## ಅಂಶ ಮತ್ತು ಛೇದ

$\frac{1}{2}$ , $\frac{1}{4}$ ಮತ್ತು $\frac{3}{4}$ ಎಂಬ ಸಂಖ್ಯೆಗಳು ಭಿನ್ನರಾಶಿಯ ಸಂಖ್ಯೆಗಳು.

| ಭಿನ್ನರಾಶಿಗಳು | ಅಂಶ | ಛೇದ |
|---|---|---|
| $\frac{1}{2}$ | 1 | 2 |
| $\frac{1}{4}$ | 1 | 4 |
| $\frac{3}{4}$ | 3 | 4 |

## ಸಮಾನ ಭಿನ್ನರಾಶಿ



ಚಿತ್ರ (1)



ಚಿತ್ರ (2)

ಚಿತ್ರ (1), ರಲ್ಲಿ ಒಂದು ವೃತ್ತವನ್ನು ಎರಡು ಸಮ ಭಾಗಗಳಾಗಿ ವಿಂಗಡಿಸಿ ಒಂದು ಭಾಗಕ್ಕೆ ಬಣ್ಣ ಹಚ್ಚಲಾಗಿದೆ. ಬಣ್ಣ ಹಚ್ಚಿದ ಭಾಗದ ಭಿನ್ನರಾಶಿಯು $\frac{1}{2}$ ಆಗಿದೆ.

ಚಿತ್ರ (2), ರಲ್ಲಿ ವೃತ್ತವನ್ನು ನಾಲ್ಕು ಸಮ ಭಾಗಗಳಾಗಿ ವಿಂಗಡಿಸಿ. ಎರಡು ಭಾಗಗಳಿಗೆ ಬಣ್ಣ ಹಚ್ಚಲಾಗಿದೆ.

ಬಣ್ಣ ಹಚ್ಚಿದ ಭಾಗದ ಭಿನ್ನರಾಶಿಯು $\frac{2}{4}$ ಆಗಿದೆ.

ಎರಡು ವೃತ್ತಗಳ ಬಣ್ಣ ಹಚ್ಚಿದ ಭಾಗವು ಒಂದೇ ರೀತಿಯಾಗಿದೆ ಎಂಬುದನ್ನು ನೀವು ಗಮನಿಸಿದ್ದೀರಾ.

**ಆದುದರಿಂದ, $\frac{1}{2}$ ಮತ್ತು $\frac{2}{4}$ ಸಮಾನ ಭಿನ್ನರಾಶಿಗಳಾಗಿವೆ.**

**ಕೆಳಗೆ ನೀಡಿದ ಚಿತ್ರಗಳನ್ನು ನೋಡಿ.**



ಚಿತ್ರ (1) ಚಿತ್ರ (2) ಚಿತ್ರ (3)

ಚಿತ್ರ (1) ರಲ್ಲಿ ವೃತ್ತವನ್ನು 2 ಸಮ ಭಾಗಗಳಾಗಿ ವಿಂಗಡಿಸಿ ಎರಡು ಭಾಗಗಳಿಗೂ ಬಣ್ಣ ಹಚ್ಚಲಾಗಿದೆ. ಬಣ್ಣ ಹಚ್ಚಿದ ಭಾಗದ ಭಿನ್ನರಾಶಿಯು $\frac{2}{2}$ ಆಗಿದೆ.

ಚಿತ್ರ (2) ರಲ್ಲಿ ವೃತ್ತವನ್ನು 3 ಸಮ ಭಾಗಗಳಾಗಿ ವಿಂಗಡಿಸಿ ಎರಡು ಭಾಗಗಳಿಗೂ ಬಣ್ಣ ಹಚ್ಚಲಾಗಿದೆ. ಬಣ್ಣ ಹಚ್ಚಿದ ಭಾಗದ ಭಿನ್ನರಾಶಿಯು $\frac{3}{3}$ ಆಗಿದೆ.

ಚಿತ್ರ (3) ರಲ್ಲಿ ವೃತ್ತವನ್ನು 4 ಸಮ ಭಾಗಗಳಾಗಿ ವಿಂಗಡಿಸಿ ಎರಡು ಭಾಗಗಳಿಗೂ ಬಣ್ಣ ಹಚ್ಚಲಾಗಿದೆ. ಬಣ್ಣ ಹಚ್ಚಿದ ಭಾಗದ ಭಿನ್ನರಾಶಿಯು $\frac{4}{4}$ ಆಗಿದೆ.

ಮೇಲಿನ ವೃತ್ತಗಳಿಂದ ನೀವು ಏನನ್ನು ಗಮನಿಸುವಿರಿ?

ವೃತ್ತಗಳ ಬಣ್ಣ ಹಚ್ಚಿದ ಭಾಗಗಳು ಎಲ್ಲಾ ಸಮವಾಗಿವೆ.

**$\frac{2}{2}$, $\frac{3}{3}$ ಮತ್ತು $\frac{4}{4}$ ಇವುಗಳನ್ನುಸಮಾನ ಭಿನ್ನರಾಶಿಗಳೆಂದೂ ಕರೆಯುತ್ತಾರೆ.**

# 4 ನಮೂನೆಗಳು

## ನಮ್ಮ ಸುತ್ತಮುತ್ತಲಿನ ನಮೂನೆಗಳು

ದೈನಂದಿನ ಜೀವನದಲ್ಲಿ ನಾವು ಅನೇಕ ನಮೂನೆಗಳನ್ನು ಕಾಣುತ್ತೇವೆ.

"ವಸ್ತುಗಳು, ಘಟನೆಗಳು ಮತ್ತು ಸಂಖ್ಯೆಗಳು ಒಂದು ವಿಶಿಷ್ಟ ರೀತಿಯಲ್ಲಿ ಏಕ ರೂಪವಾಗಿ ಪುನರಾವರ್ತನೆಯಾದಾಗ ನಮೂನೆಗಯು ರೂಪುಗೊಳ್ಳುತ್ತದೆ"

ಗಣಿತ

### ಉದಾಹರಣೆ



ವಸ್ತುಗಳು, ಜ್ಯಾಮಿತೀಯ (ರೇಖಾಗಣಿತ) ಆಕಾರಗಳು, ಚಿತ್ರಗಳು, ಸಂಖ್ಯೆಗಳು, ಧ್ವನಿಗಳು, ತಟ್ಟುವಿಕೆ (ಸ್ಪರ್ಶಕ್ರಿಯೆ) ಮತ್ತು ಭೌತಿಕ ಕ್ರಿಯೆಗಳು (ಚಪ್ಪಾಳೆ ಹೊಡೆಯುವುದು, ಹಾರುವುದು) ಮೊದಲಾದವುಗಳನ್ನುಉಪಯೋಗಿಸಿ ನಮೂನೆಗಳ ನಾನಾ ರೂಪಗಳನ್ನು ಉಂಟುಮಾಡಬಹುದು.

## ಜ್ಯಾಮಿತೀಯ ಆಕಾರಗಳಲ್ಲಿ ನಮೂನೆಗಳು

ಎರಡು ವಿಧದ ನಮೂನೆಗಳು ಇವೆ. ಅವುಗಳು

(ವರ್ಧಿಸುವ) ಬೆಳೆಯುವ ನಮೂನೆಗಳು

ಪುನರಾವರ್ತಿತ ನಮೂನೆಗಳು

### ವರ್ಧಿಸುವ ನಮೂನೆಗಳು.

ಕೆಲವು ನಮೂನೆಗಳು ಮತ್ತು ವಿನ್ಯಾಸಗಳು ಸರಳರೇಖೆ ಮತ್ತು ಜ್ಯಾಮಿತೀಯ ಆಕಾರಗಳೊಂದಿಗೆ ಬೆಳೆದರೆ (ವರ್ಧಿಸಿದರೆ), ಅವುಗಳನ್ನು **ಬೆಳೆಯುವ ನಮೂನೆಗಳು** ಎಂದು ಕರೆಯುತ್ತಾರೆ.

## ಉದಾಹರಣೆ



## ಅಭ್ಯಾಸ 1

**ನಮೂನೆಯನ್ನು ಮುಂದುವರಿಸಿ :**

1.  ________________

2.  ________________

3.  ________________

## ಪುನರಾವರ್ತಿತ ನಮೂನೆಗಳು :

ಕೆಲವು ನಮೂನೆಗಳ ಮತ್ತು ವಿನ್ಯಾಸಗಳು ಸರಳರೇಖೆ ಮತ್ತು ಜ್ಯಾಮಿತೀಯ ಆಕಾರಗಳೊಂದಿಗೆ ಪುನರಾವರ್ತನೆಯಾದರೆ, ಅವುಗಳನ್ನು **ಪುನರಾವರ್ತಿತ ನಮೂನೆಗಳು** ಎಂದು ಕರೆಯುತ್ತಾರೆ.

**ಉದಾಹರಣೆ**





### ಅಭ್ಯಾಸ 2

**ನಮೂನೆಯನ್ನು ಮುಂದುವರಿಸಿ :**

1.  ______________

2.  ______________

3. ______________

ಗಣಿತ

## ಚಟುವಟಿಕೆ 1

ಮನೆಯಿಂದ ಶಾಲೆಗೆ ⬬ → ■ → ▲ → ★ ತಲಪುವ ನಮೂನೆಯನ್ನು ಹಿಂಬಾಲಿಸಿ.




## ಯೋಜನೆ

**ಕೆಳಗಿನವುಗಳಿಂದ ನಿಮ್ಮದೇ ಆದ ನಮೂನೆಗಳನ್ನು ತಯಾರಿಸಿ:**

**(i)** ಎಲೆಗಳನ್ನು ಉಪಯೋಗಿಸಿ,

**(ii)** ಹೂಗಳನ್ನು ಉಪಯೋಗಿಸಿ.

**(iii)** ಬಣ್ಣದ ಗುಂಡಿಗಳನ್ನು ಉಪಯೋಗಿಸಿ.

**(iv)** ಕಾಗದದ ತಟ್ಟೆಯ ಮೇಲೆ ಬಿಂದಿ, ಸ್ಟಿಕರ್ ಮತ್ತು ಜರ್ಮ್‌ರೇಸನ್ನು ಉಪಯೋಗಿಸಿ.

## ಸಂಖ್ಯೆಗಳಲ್ಲಿ ನಮೂನೆಗಳು

ನಾವು ಚಿತ್ರಗಳಿಂದ ಕೆಲವು ನಮೂನೆಗಳನ್ನು ಮಾಡಿದೆವು. ಸಂಖ್ಯೆಗಳಿಂದ ಕೂಡಾ ನಾವು ಕೆಲವು ನಮೂನೆಗಳನ್ನು ಮಾಡಬಹುದು.

5, 10, 15, 20, ...

10, 20, 30, 40, ...

20, 40, 60, 80, 100, ...

ಸಂಖ್ಯೆಗಳಲ್ಲಿ ಕೂಡಾ ಎರಡು ವಿಧದ ನಮೂನೆಗಳಿವೆ.

ಬೆಳೆಯುವ (ವರ್ಧಿಸುವ) ನಮೂನೆಗಳು

ಪುನರಾವರ್ತಿತ ನಮೂನೆಗಳು

**ಬೆಳೆಯುವ (ವರ್ಧಿಸುವ) ನಮೂನೆಗಳು :**

ಕೆಲವು ಸಂಖ್ಯಾ ನಮೂನೆಗಳು ಬೆಸ ಸಂಖ್ಯೆ ಮತ್ತು ಸಮ ಸಂಖ್ಯೆಗಳೊಂದಿಗೆ ಬೆಳೆದರೆ ಅವುಗಳನ್ನು ಬೆಳೆಯುವ (ವರ್ಧಿಸುವ) ನಮೂನೆಗಳು ಎಂದು ಕರೆಯುವರು.

**ಉದಾಹರಣೆ**

1, 3, 5,...

10, 20, 30,...

17, 19, 21,...

**ಪುನರಾವರ್ತಿತ ನಮೂನೆಗಳು :**

ಕೆಲವು ಸಂಖ್ಯಾ ನಮೂನೆಗಳು ಬೆಸ ಸಂಖ್ಯೆ ಮತ್ತು ಸಮ ಸಂಖ್ಯೆಗಳೊಂದಿಗೆ ಪುನರಾವರ್ತನೆಗೊಂಡರೆ, ಅವುಗಳನ್ನು ಪುನರಾವರ್ತಿತ ನಮೂನೆಗಳು ಎಂದು ಕರೆಯುವರು.

**ಉದಾಹರಣೆ**

744, 744, 744, ........

156, 156, 156, ........

101, 101, 101, ........

**ಅಭ್ಯಾಸ 3**

**ಕೆಳಗಿನ ನಮೂನೆಗಳನ್ನು ಭರ್ತಿ ಮಾಡಿ :**

a) 2, 4, 6, 2, 4, ____,____,____

b) 1, 3, 6, 10, ____,____, ____

c) 1, 3, 7, 13, ____, ____, ____

d) 15, 25, 35, 15,____,____,____

e) 111, 222, 333,____,____,____

f) 10, 20, 30, 10,____,____,____

ಗಣಿತ

## ಅಭ್ಯಾಸ 4

ಎ) ಕೆಳಗಿನ ನಮೂನೆಗಳನ್ನು ಭರ್ತಿ ಮಾಡಿ :

1

2


3


ಬಿ) ನಮೂನೆಗಳನ್ನು ಗಮನಿಸಿ ಖಾಲಿ ಜಾಗವನ್ನು ತುಂಬಿರಿ :



## ಸಿ) ಕೆಳಗಿನವುಗಳನ್ನು ಹೊಂದಿಸಿ ಮತ್ತು ನಮೂನೆಯನ್ನು ಪೂರ್ತಿಮಾಡಿ :

ಎ) 3, 6, 9, 12, 15,

ಬಿ) 4, 8, 12, 16, 20,

ಸಿ) 395, 390, 385, 380, 375,

ಡಿ) 120, 130, 140, 150,

ಇ) 11, 22, 33, 44, 55, 11 ,

## ಡಿ) ಕೆಳಗಿನವುಗಳನ್ನು ಪೂರ್ತಿಮಾಡಿ :

2 ಹೂವುಗಳು

4 ಹೂವುಗಳು

7 ಹೂವುಗಳು

___ ಹೂವುಗಳು

3 ಬಲೂನುಗಳು

5 ಬಲೂನುಗಳು

7 ಬಲೂನುಗಳು

___ ಬಲೂನುಗಳು

## ಸಮಮಿತಿ

### ಚಟುವಟಿಕೆ 2




ಆಕಾರದ ಒಂದು ಅರ್ಧವು ಇನ್ನೊಂದು ಅರ್ಧದ ಹಾಗೆಯೇ ಇದೆ ಎಂಬುದನ್ನು ಗುರುತಿಸಬಹುದು. ಆಕೃತಿಯನ್ನು ಎರಡು ಅರ್ಧಗಳನ್ನಾಗಿ ವಿಭಜಿಸುವ ರೇಖೆಗೆ **'ಸಮಮಿತಿಯ ರೇಖೆ '** ಎಂದು ಕರೆಯುವರು.

**ಇದನ್ನು ಪ್ರಯತ್ನಿಸಿ!**

ಸಮಮಿತಿಯ ಆಕಾರಗಳಲ್ಲಿ ಒಂದು ಅರ್ಧವು ಮತ್ತೊಂದರ ಕನ್ನಡಿಯ ಪ್ರತಿಬಿಂಬವಾಗಿದೆ.

## ಚಟುವಟಿಕೆ 3

★ ಒಂದು ತುಂಡು ಕಾಗದವನ್ನು ತೆಗೆದುಕೊಳ್ಳಿ.

★ ಕಾಗದದ ಮೇಲೆ ಶಾಯಿಯ ಕೆಲವು ಬಿಂದುಗಳನ್ನು ಚೆಲ್ಲಿ.

★ ಈಗ ಕಾಗದವನ್ನು ಮಡಚಿ ಮತ್ತು ಅದನ್ನು ಒತ್ತಿ.

★ ನಿಮಗೆ ಒಂದು ಸಮಮಿತಿಯ ಆಕೃತಿ ಸಿಗುತ್ತದೆ.



### ಉದಾಹರಣೆ

**ಕೆಳಗಿನ ಸಮಮಿತಿಯ ಅಕ್ಷರಗಳಲ್ಲಿ ಸಮಮಿತಿಯ ರೇಖೆಗಳನ್ನು ಗಮನಿಸಿ.**

ಒಂದು ಆಕೃತಿಯನ್ನು ಎರಡು ಸಮಭಾಗಗಳಾಗಿ ವಿಂಗಡಿಸುವುದು ಹೇಗೆ?



## ಯೋಜನೆ

ವಿದ್ಯಾರ್ಥಿಗಳು ತಾವಾಗಿಯೇ ಸಮಮಿತಿಯ ನಮೂನೆಗಳನ್ನು ರಚಿಸಿ ಅದನ್ನು ತರಗತಿಯಲ್ಲಿ ಪ್ರದರ್ಶಿಸುವಂತೆ ಮಾಡಿ.

## ಅಭ್ಯಾಸ 5

1) ಸಮಮಿತಿಯ ಆಕೃತಿಗಳಿಗೆ ಬಣ್ಣ ಹಚ್ಚಿ :



**2) ಕೆಳಗಿನ ಆಕೃತಿಗಳಿಗೆ ಸಮಮಿತಿಯ ರೇಖೆಗಳನ್ನು ಎಳೆಯಿರಿ :**

1)



2)

3)



4)



5)



6)

**3) ಆಕೃತಿಯ ಇನ್ನೊಂದು ಅರ್ಧವನ್ನು ಸಮಮಿತಿಯಾಗುವಂತೆ ಎಳೆಯಿರಿ :**

1)



2)



3)



4)



5)



6)



4) ಕೆಳಗಿನವುಗಳು ಸಮಮಿತಿಯ ನಮೂನೆಗಳು ಹೌದೋ ಅಲ್ಲವೋ ಎಂಬುದನ್ನು ✓ ಅಥವಾ × ಎಂಬ ಚಿಹ್ನೆಗಳನ್ನು ಉಪಯೋಗಿಸಿ ಗುರುತಿಸಿರಿ.

**ಉದಾಹರಣೆ**



✓



☐



☐



☐



☐

ಗಣಿತ

# 5 ದತ್ತಾಂಶಗಳ ಅಧ್ಯಯನ

**ಮೇಲಿನ ಚಿತ್ರವನ್ನು ನೋಡಿ ಅಗತ್ಯವಿರುವ ದತ್ತಾಂಶವನ್ನು ತುಂಬಿರಿ :**

1) ಕಟ್ಟಡಗಳ ಸಂಖ್ಯೆ

2) ಹಕ್ಕಿಗಳ ಸಂಖ್ಯೆ

3) ತಾವರೆಯ ಸಂಖ್ಯೆ

4) ಮರಗಳ ಸಂಖ್ಯೆ

5) ಬಾತುಕೋಳಿಗಳ ಸಂಖ್ಯೆ

6) ಮೀನಿನ ಸಂಖ್ಯೆ

## ಚಟುವಟಿಕೆ 1

**ನಿಮ್ಮ ಶಾಲೆಯಿಂದ ಕೆಳಗಿನ ಪ್ರಶ್ನೆಗಳಿಗೆ ದತ್ತಾಂಶವನ್ನು ಸಂಗ್ರಹಿಸುವಂತೆ ಪ್ರಯತ್ನಿಸಿ.**

1) ತರಗತಿಗಳ ಸಂಖ್ಯೆ

2) ಶಿಕ್ಷಕರ ಸಂಖ್ಯೆ

3) ಅಧ್ಯಾಪಕರ ಸಂಖ್ಯೆ

4) ಅಧ್ಯಾಪಕಿಯರ ಸಂಖ್ಯೆ

5) ಮರಗಳ, ಮೋಟಾರ್ ಸೈಕಲುಗಳ,ಸೈಕಲುಗಳು, ಶೌಚಾಲಯಗಳ ಮತ್ತು ನಲ್ಲಿಗಳ ಸಂಖ್ಯೆ.

6) I, II, III, IV ಮತ್ತು V ನೇ ತರಗತಿಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ.

## ಪ್ರಶ್ನಾವಳಿಯ ಮಾದರಿ :

ದತ್ತಾಂಶವು ನಮಗೆ ಮಾಹಿತಿಯನ್ನು ನೀಡುತ್ತದೆ! ಮಾಹಿತಿ ಸಂಗ್ರಹಣೆಯು ನಮಗೆ ಅನೇಕ ಸಂಗತಿಗಳನ್ನು ತಿಳಿದುಕೊಳ್ಳಲು ಸಹಾಯಮಾಡುತ್ತದೆ!

ಪ್ರಶ್ನಾವಳಿಯು ಮಾಹಿತಿ ಸಂಗ್ರಹಣೆಯ ವಿಧಾನಗಳಲ್ಲಿ ಒಂದು.

ನಮಗೆ ಅನವಶ್ಯವಿರುವ ಮಾಹಿತಿಯ ಮೇಲೆ ಪ್ರಶ್ನೆಗಳನ್ನು ರೂಪಿಸಲಾಗುತ್ತದೆ.



ಕುಟುಂಬದ ಮುಖ್ಯಸ್ಥನ ಹೆಸರು

ಕುಟುಂಬದಲ್ಲಿರುವ ಸದಸ್ಯರ ಸಂಖ್ಯೆ
ದೊಡ್ಡವರು ಮಕ್ಕಳು

ಅಕ್ಷರಸ್ಥರ ಸಂಖ್ಯೆ

ಓದುತ್ತಿರುವ ಮಕ್ಕಳ ಸಂಖ್ಯೆ
ಶಾಲೆ ಕಾಲೇಜು

ಕುಟುಂಬದ ಮುಖ್ಯಸ್ಥನ ಉದ್ಯೋಗ

ಕುಟುಂಬದ ಒಟ್ಟು ವರಮಾನ

ವಿದ್ಯಾರ್ಥಿಯ ಮಾತೃ ಭಾಷೆ

"ದತ್ತಾಂಶಗಳ ಸಂಗ್ರಹಣೆ, ಸಂದರ್ಶನ ಮತ್ತು ಪ್ರಶ್ನಾವಳಿಗಳ ಮೂಲಕ ಮಾಹಿತಿ ಸಂಗ್ರಹಣೆಯ ವಿಧಾನವನ್ನು ಸಮೀಕ್ಷೆ ಎನ್ನುವರು."

## ಚಟುವಟಿಕೆ 2

**ಬೇಸಿಗೆಯ ರಜಾದಿನಗಳಲ್ಲಿ ಕೆಳಗಿನ ಕೋಷ್ಟಕವು ಆಟದ ಮೈದಾನದಲ್ಲಿ ಗೆಳೆಯರು ಕಳೆದ ಸಮಯವನ್ನು ತೋರಿಸುತ್ತದೆ .**

| ದಿನ / ಹೆಸರು | ಸೋಮವಾರ | ಮಂಗಳವಾರ | ಬುಧವಾರ | ಗುರುವಾರ | ಮೊತ್ತ |
|---|---|---|---|---|---|
| ಬಾಲು | 2 | 1 | 2 | 1 | ............... |
| ರಾಜ | 2 | 1 | 2 | 3 | ............... |
| ಮಲರ್ | 1 | 3 | 3 | 2 | ............... |
| ವರುಣ್ | 2 | 1 | 0 | 2 | ............... |
| ಸಂಧ್ಯಾ | 3 | 2 | 1 | 1 | ............... |

1. ಯಾರು ಗರಿಷ್ಠ (ಹೆಚ್ಚಿನ) ಸಮಯವನ್ನು ಆಟದ ಮೈದಾನದಲ್ಲಿ ಕಳೆದರು?

2. ಆಟದ ಮೈದಾನದಲ್ಲಿ ಯಾರು ಕನಿಷ್ಠ (ಕಡಿಮೆ) ಸಮಯವನ್ನು ಕಳೆದರು?

3. ಗುರುವಾರದಂದು ಆಟದ ಮೈದಾನದಲ್ಲಿ ಯಾರು ಹೆಚ್ಚು (ಗರಿಷ್ಠ) ಸಮಯವನ್ನು ಕಳೆದರು?

4. ಸಂಧ್ಯಾ ಸೋಮವಾರ ಆಟದ ಮೈದಾನದಲ್ಲಿ ಎಷ್ಟು ಗಂಟೆಗಳನ್ನು ಕಳೆದಳು?

ಗಣಿತ

## ಯೋಜನೆ

**ನಿಮ್ಮ ತರಗತಿಯ ಗೆಳೆಯರಿಗೆ ಇಷ್ಟವಾದ ವಿಷಯಗಳು ಯಾವುದು ಎಂಬುದನ್ನು ಕೇಳಿ ಅದನ್ನು ಕೋಷ್ಟಕದಲ್ಲಿ ದಾಖಲು ಮಾಡಿ. (ಗುಂಪು ಕೆಲಸ)**

| ಕ್ರ.ಸಂ. | ವಿಷಯಗಳು | ವಿದ್ಯಾರ್ಥಿಗಳ ಸಂಖ್ಯೆ |
|---|---|---|
| 1. | ತಮಿಳು / ಕನ್ನಡ | |
| 2. | ಇಂಗ್ಲೀಷು | |
| 3. | ಗಣಿತ | |
| 4. | ವಿಜ್ಞಾನ | |
| 5. | ಸಮಾಜ ವಿಜ್ಞಾನ | |
| 6. | ಡ್ರಾಯಿಂಗ್ | |
| 7. | ಸಂಗೀತ | |
| 8. | ಆಟ | |
| 9. | ಕಂಪ್ಯೂಟರ್ | |
| 10. | ಸಾಮಾನ್ಯ ಜ್ಞಾನ | |

**ವಿಷಯವನ್ನು ಹೆಚ್ಚಿನವರು ಇಷ್ಟಪಟ್ಟರು.**

### ಗುರುತಿನ ಗೀಟುಗಳು

ಸಂಖ್ಯೆಗಳ ಆವಿಷ್ಕಾರದ (ಕಂಡುಹಿಡಿಯುವುದಕ್ಕೆ) ಮೊದಲು ಪುರಾತನರು ಬೆರಳುಗಳು ಬಿಂದುಗಳು ಮತ್ತು ಗುರುತಿನ ಗೀಟುಗಳನ್ನು ಎಣಿಸುವುದಕ್ಕೆ ಉಪಯೋಗಿಸುತ್ತಿದ್ದರು. 'I' ನ್ನು ಗುರುತಿನ ಗೀಟು ಎಂದು ಕರೆಯುತ್ತಾರೆ. ಎಣಿಸುವುದನ್ನು ಸುಲಭವಾಗಿಸಲು, 4 ಗುರುತಿನ ಗೀಟುಗಳ ನಂತರ 5 ನೇ ಗುರುತಿನ ಗೀಟನ್ನು 𝍸 ಎಂದು ಸೇರಿಸಲಾಗುತ್ತಿತ್ತು.

| ಸಂಖ್ಯೆ | ಗುರುತಿನ ಗೀಟುಗಳು |
|---|---|
| 1 | I |
| 2 | II |
| 3 | III |
| 4 | IIII |
| 5 | 𝍸 |
| 6 | 𝍸 I |
| 7 | 𝍸 II |
| 8 | 𝍸 III |
| 9 | 𝍸 IIII |
| 10 | 𝍸 𝍸 |

## ಚಟುವಟಿಕೆ 3

3 ನೇ ತರಗತಿಯ ವಿದ್ಯಾರ್ಥಿಗಳು ಗಣಿತದಲ್ಲಿ ಗಳಿಸಿದ ಅಂಕಗಳನ್ನು ಕೆಳಗೆ ನೀಡಲಾಗಿದೆ.

| | | | | | | | | | |
|---|---|---|---|---|---|---|---|---|---|
| 40 | 60 | 48 | 52 | 58 | 43 | 58 | 40 | 60 | 52 |
| 52 | 58 | 48 | 40 | 60 | 40 | 40 | 53 | 52 | 43 |
| 43 | 52 | 40 | 48 | 53 | 60 | 60 | 52 | 40 | 48 |

ಮೇಲಿನ ಅಂಕಗಳನ್ನು ಗುರುತಿನ ಗೀಟುಗಳನ್ನು ಉಪಯೋಗಿಸಿ ಕೋಷ್ಟಕಕ್ಕೆ ಬದಲಾಯಿಸಿರಿ.

| ಅಂಕಗಳು | ಗುರುತಿನ ಗೀಟುಗಳು | ವಿದ್ಯಾರ್ಥಿಗಳ ಸಂಖ್ಯೆ |
|---|---|---|
| 40 | 卌 \|\| | 7 |
| 43 | | |
| 48 | | |
| 52 | | |
| 53 | | |
| 58 | | |
| 60 | | |
| | ಮೊತ್ತ | |

## ಅಭ್ಯಾಸ 1

ಶಾಲೆಯಲ್ಲಿ ದೈಹಿಕ ಶಿಕ್ಷಣದ ಅಧ್ಯಾಪಕರು 20 ವಿದ್ಯಾರ್ಥಿಗಳ ಎತ್ತರವನ್ನು (ಸೆಂಟಿ ಮೀಟರುಗಳಲ್ಲಿ) ದಾಖಲಿಸಿದರು.

| | | | | |
|---|---|---|---|---|
| 100 | 118 | 110 | 118 | 118 |
| 118 | 100 | 100 | 118 | 100 |
| 110 | 100 | 118 | 110 | 110 |
| 100 | 110 | 100 | 100 | 110 |

ಮೇಲಿನ ದತ್ತಾಂಶಕ್ಕೆ ಗುರುತಿನ ಗೀಟುಗಳೊಂದಿಗೆ ಕೋಷ್ಟಕವನ್ನು ತಯಾರಿಸಿ.

| ಎತ್ತರ (ಸೆ.ಮೀ.) | ಗುರುತಿನ ಗೀಟುಗಳು | ವಿದ್ಯಾರ್ಥಿಗಳ ಸಂಖ್ಯೆ |
|---|---|---|
| **100** | | |
| **110** | | |
| **118** | | |
| | **ಮೊತ್ತ** | |

ಗಣಿತ

### ಚಿತ್ರಸಂಕೇತಗಳು

ಚಿಹ್ನೆಗಳು ಮತ್ತು ಚಿತ್ರಗಳ ರೂಪದಲ್ಲಿ ದತ್ತಾಂಶಗಳ ನಿರೂಪಿಸುವಿಕೆ ಅಧ್ಯಯನಕ್ಕೆ ಸುಲಭ. ಈ ರೀತಿಯ ನಿರೂಪಿಸುವಿಕೆಯನ್ನು **"ಚಿತ್ರಸಂಕೇತ"** ಎನ್ನುವರು.

## ಚಟುವಟಿಕೆ 4

**ಕೆಳಗಿನ ಚಿತ್ರ ಸಂಕೇತವು (ಚಿತ್ರಲಿಪಿ) ಒಂದು ಅಂಗಡಿಯಲ್ಲಿ ಮಾರಾಟವಾದ ಆಟಿಕೆಗಳನ್ನು ತೋರಿಸುತ್ತದೆ.**




**ಮೇಲಿನ ಚಿತ್ರಸಂಕೇತವನ್ನು (ಚಿತ್ರ ಲಿಪಿ) ನೋಡಿ ಅಗತ್ಯವಿರುವ ದತ್ತಾಂಶವನ್ನು ತುಂಬಿಸಿ.**

ಎ) ಮಾರಾಟವಾದ ಆಟಿಕೆಗಳ ಒಟ್ಟು ಸಂಖ್ಯೆ [ ]

ಬಿ) ಮಾರಾಟವಾದ ಚೆಂಡುಗಳ ಒಟ್ಟು ಸಂಖ್ಯೆ [ 6 ]

ಸಿ) ಕಡಿಮೆ ಸಂಖ್ಯೆಯಲ್ಲಿ ಮಾರಾಟವಾದ ಆಟಿಕೆಯ ಹೆಸರು [ ]

ಡಿ) ಹೆಚ್ಚಿನ ಸಂಖ್ಯೆಯಲ್ಲಿ ಮಾರಾಟವಾದ ಆಟಿಕೆಯ ಹೆಸರು [ ]

ಇ) ಮಾರಾಟವದ ಬಸ್ಸುಗಳ ಒಟ್ಟು ಸಂಖ್ಯೆ [ ]

## ಚಟುವಟಿಕೆ 5

**ಕೆಳಗಿನ ಚಿತ್ರ ಸಂಕೇತ ಅಂಗಡಿಯಲ್ಲಿ ಒಂದು ವಾರದಲ್ಲಿ ಮಾರಾಟವಾದ ಸೇಬುಗಳ ಸಂಖ್ಯೆಯನ್ನು**

= 10 ಸೇಬುಗಳು




**ಮೇಲಿನ ಕೋಷ್ಟಕದಲ್ಲಿ ನೀಡಲಾದ ದತ್ತಾಂಶಗಳಿಂದ ಕೆಳಗಿನ ಪ್ರಶ್ನೆಗಳನ್ನು ಉತ್ತರಿಸಿರಿ.**

1) ಆರು ದಿನಗಳಲ್ಲಿ ಮಾರಾಟವಾದ ಸೇಬುಗಳ ಒಟ್ಟು ಸಂಖ್ಯೆ

2) ಗುರುವಾರ ಮಾರಾಟವಾದ ಒಟ್ಟು ಸೇಬುಗಳ ಸಂಖ್ಯೆ

3) ಹೆಚ್ಚಿನ ಮಾರಾಟವು ---------- ಆಯಿತು.

4) ಕಡಿಮೆ ಮಾರಾಟವು ---------- ಆಯಿತು.

5) ಸಮಾನ ಮಾರಾಟವು ______ ಮತ್ತು ______ ಗಳಂದು ಆದುವು.

## ಚಟುವಟಿಕೆ 6

**ಚಿತ್ರಸಂಕೇತದ (ಚಿತ್ರಲಿಪಿ) ರೂಪದಲ್ಲಿ ಕೆಳಗಿನ ದತ್ತಾಂಶವನ್ನು ನಿರೂಪಿಸಿರಿ.**

= 5 ವಿದ್ಯಾರ್ಥಿಗಳು

| ತರಗತಿ | ವಿದ್ಯಾರ್ಥಿಗಳ ಸಂಖ್ಯೆ |
|---|---|
| I | 15 |
| II | 20 |
| III | 25 |
| IV | 20 |
| V | 30 |

| | |
|---|---|
| I ನೇ ತರಗತಿ | |
| II ನೇ ತರಗತಿ | |
| III ನೇ ತರಗತಿ | |
| IV ನೇ ತರಗತಿ | |
| V ನೇ ತರಗತಿ | |

## ಕೆಲಸದ ಹಾಳೆ

ತಾರೀಕು:............................

**1) ಕ್ರಿಕೆಟ್ ಆಯ್ಕೆಯ ಪಂದ್ಯದಲ್ಲಿ, 25 ವಿದ್ಯಾರ್ಥಿಗಳು ಭಾಗವಹಿಸಿದರು. ಪ್ರತಿಯೊಬ್ಬ ವಿದ್ಯಾರ್ಥಿಯು ಪಡೆದ ರನ್ನುಗಳ ಸಂಖ್ಯೆಯನ್ನು ಕೆಳಗೆ ನೀಡಲಾಗಿದೆ.**

| | | | | |
|---|---|---|---|---|
| 30 | 30 | 32 | 40 | 45 |
| 32 | 30 | 40 | 45 | 40 |
| 32 | 32 | 32 | 30 | 40 |
| 45 | 40 | 45 | 45 | 40 |
| 30 | 30 | 32 | 32 | 30 |

ಮೇಲಿನ ದತ್ತಾಂಶಕ್ಕೆ ಗುರುತಿನ ಗೀಟುಗಳೊಂದಿಗೆ ಒಂದು ಕೋಷ್ಟಕವನ್ನು ತಯಾರಿಸಿ.

| ರನ್ನುಗಳು | ಅಂಕಿಗಳು | ವಿದ್ಯಾರ್ಥಿಗಳ ಸಂಖ್ಯೆ |
|---|---|---|
| | | |
| | | |
| | | |
| | | |

ಗಣಿತ

**2) ಶಾಲೆಗಳಿಗೆ ಒದಗಿಸಿದ ಕಂಪ್ಯೂಟರುಗಳ ಸಂಖ್ಯೆಯನ್ನು ಕೆಳಗೆ ಕೊಡಲಾಗಿದೆ.**

= 4 ಕಂಪ್ಯೂಟರುಗಳು

**ಮೇಲಿನ ಚಿತ್ರಸಂಕೇತ(ಚಿತ್ರಲಿಪಿ)ದಿಂದ ಕೆಳಗಿನ ದತ್ತಾಂಶವನ್ನು ತುಂಬಿರಿ.**

ಎ) ಶಾಲೆ 'ಎ' ಗೆ ಒದಗಿಸಿದ ಕಂಪ್ಯೂಟರುಗಳ ಸಂಖ್ಯೆ

ಬಿ) ಎಲ್ಲ ಶಾಲೆಗಳಿಗೆ ಒದಗಿಸಿದ ಒಟ್ಟು ಕಂಪ್ಯೂಟರುಗಳ ಸಂಖ್ಯೆ

ಸಿ) ಶಾಲೆ 'ಡಿ' ಗೆ ಒದಗಿಸಿದ ಕಂಪ್ಯೂಟರುಗಳ ಸಂಖ್ಯೆ

ಡಿ) ಶಾಲೆ 'ಬಿ' ಗೆ ಒದಗಿಸಿದ ಕಂಪ್ಯೂಟರುಗಳ ಸಂಖ್ಯೆ

**3) ಚಿತ್ರಸಂಕೇತದ (ಚಿತ್ರಲಿಪಿ) ಮೂಲಕ ನಿಮ್ಮ ಶಾಲೆಯ ಪ್ರತೀ ತರಗತಿಯಲ್ಲಿರುವ ವಿದ್ಯಾರ್ಥಿಗಳ ಸಂಖ್ಯೆಯನ್ನು ನಿರೂಪಿಸಿರಿ.**

ಟೀಕೆಗಳು

ಶಿಕ್ಷಕರ ಸಹಿ

# ‘ನನ್ನಿಂದ ಸಾಧ್ಯ, ನಾನು ಮಾಡಿದೆ’
('I can, I did')
# ವಿದ್ಯಾರ್ಥಿಗಳ ಚಟುವಟಿಕೆ ದಾಖಲೆ

**ವಿಷಯ :**

| ಕ್ರ.ಸಂ | ತಾರೀಖು | ಪಾಠದ ಸಂಖ್ಯೆ | ಪಾಠದ ಹೆಸರು | ಚಟುವಟಿಕೆಗಳು | ಅಭಿಪ್ರಾಯಗಳು |
|---|---|---|---|---|---|
| | | | | | |
| | | | | | |
| | | | | | |
| | | | | | |
| | | | | | |
| | | | | | |
| | | | | | |
| | | | | | |
| | | | | | |
| | | | | | |
| | | | | | |